
# ಸಾಕ್ಷರತೆ ಏಕೆ?



ಭಾರತ ಜ್ಞಾನ ವಿಜ್ಞಾನ ಸಮಿತಿ

# ಸಾಕ್ಷರತೆ ಏಕೆ?



ಪ್ರಕಾಶಕರು

ಭಾರತ ಜ್ಞಾನ ವಿಜ್ಞಾನ ಸಮಿತಿ
ಕರ್ನಾಟಕ ರಾಜ್ಯ ಸಮಿತಿ
ಎಲೆಕ್ಟ್ರೋ ಕೆಮಿಕಲ್ ಸೊಸೈಟಿ ಆಫ್ ಇಂಡಿಯಾ
ಭಾರತೀಯ ವಿಜ್ಞಾನ ಮಂದಿರ
ಬೆಂಗಳೂರು – 560 012
ಫೋನ್ : 3342384

Saksharthe yeke "Why Literacy" Printed & Published by General Secretary, Bharath Gyan Vigyan Samithi, C/o Electro Chemical Society of India, Indian Institute of Science, Bangalore - 560 012, Printed at Anand Process, Bangalore - 9

First Edition : 1990
Second Edition : 1992
Third Edition : 1994

**Rs . 3.00**

ಮುಖಪುಟ : ಒಳಪುಟ ವಿನ್ಯಾಸ

ಎಂ.ಹೆಚ್. ಶ್ರೀಧರಮೂರ್ತಿ


# ವಿಮೋಚನೆಗಾಗಿ ಸಾಕ್ಷರತೆ

1

ಓದುವ ಮತ್ತು ಬರೆಯುವ ಶಕ್ತಿ ಪ್ರತಿಯೊಬ್ಬರಿಗೂ ಅಗತ್ಯ. ಇದು ನಮಗೆಲ್ಲ ಗೊತ್ತಿರುವ ವಿಷಯ. ನಮ್ಮಲ್ಲಿ ಓದು-ಬರಹ ಕಲಿಯುವುದು ಬೇಡವೆಂದು ಹೇಳುವವರಾರು? ಓದು-ಬರಹ ಬೇಕಿಲ್ಲ; ಆದರಿಂದ ನನಗೆ ತೊಂದರೆ ಅಥವಾ ನನ್ನ ಮಕ್ಕಳಿಗೂ ಅದು ಬೇಕಿಲ್ಲ ಎಂದು ಯೋಚಿಸುವವರು ಸಹ ನಮ್ಮಲ್ಲಿ ಯಾರುಂಟು?

ನಮಗೆ ಓದು-ಬರಹ ಗೊತ್ತಿದ್ದಲ್ಲಿ ಅನೇಕ ಅನುಕೂಲಗಳಿವೆ ಎಂಬ ತಿಳುವಳಿಕೆಯಿದೆ. ಉದಾಹರಣೆಗೆ, ರಾಚಪ್ಪನ ಪ್ರಸಂಗವನ್ನೇ ತೆಗೆದುಕೊಳ್ಳಿ. ಹಳ್ಳಿಯ ಬಡರೈತನಾದ ರಾಚಪ್ಪನಿಗೆ ತುರ್ತಾಗಿ ಹಣ ಬೇಕಾಯಿತು. ಸಮೀಪವಿರುವ ಪಟ್ಟಣಕ್ಕೆ ಹೋಗಿ ಲೇವಾದೇವಿ ಮಾಡುವ ಸಾಹುಕಾರನಿಂದ ಎರಡು ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದ. ಸಾಹುಕಾರ ಹಣ ನೀಡುವಾಗ ರಾಚಪ್ಪನಿಂದ ಒಂದು ಪತ್ರಕ್ಕೆ ಹೆಬ್ಬೆಟ್ಟಿನ ಗುರುತು ಪಡೆದು, ಪ್ರತಿ ತಿಂಗಳು 200 ರೂಪಾಯಿಗಳಂತೆ ಸಾಲ ಹಿಂತಿರುಗಿಸಬೇಕೆಂದು ಆಜ್ಞಾಪಿಸಿದ. ಈ ಪ್ರಕರಣವಾಗಿ ಐದು ವರ್ಷಗಳಾದವು. ಪ್ರತಿ ತಿಂಗಳು ರಾಚಪ್ಪ ಹಣ ನೀಡುತ್ತಲೇ ಬಂದಿದ್ದಾನೆ. ಆದರೆ ಸಾಹುಕಾರ ''ಇನ್ನೂ ಮೂರು ಸಾವಿರ ರೂಪಾಯಿಗಳ ಸಾಲ ಇದೆ. ಹಣ ನೀಡದೆ ಹೋದರೆ ಪೋಲೀಸರ ಸಹಾಯದಿಂದ ಮನೆ, ಹೊಲವನ್ನು ಮುಟ್ಟುಗೋಲು ಹಾಕಿಸುತ್ತೇನೆ'' ಎಂದು ರಾಚಪ್ಪನಿಗೆ ಹೆದರಿಸುತ್ತಿದ್ದಾನೆ. ಪಾಪ, ಬಡಪಾಯಿ ರಾಚಪ್ಪನಿಗೆ ಏನು ಗೊತ್ತಾಗುತ್ತೆ? ಅವನಿಗೆ ಬಡ್ಡಿ ಲೆಕ್ಕ ಹಾಕುವುದು ಬರುವುದಿಲ್ಲ ಮತ್ತು ಯಾವುದಕ್ಕಾಗಿ ಹೆಬ್ಬೆಟ್ಟು ಒತ್ತಿದ್ದೇನೆಂಬುದೂ ಗೊತ್ತಿಲ್ಲ. ಆದರೆ ತಾನು ನಿಜವಾಗಿಯೂ ಮೋಸ ಹೋಗಿದ್ದೇನೆ ಎಂಬುದು ಈಗ ಗೊತ್ತಾಗಿದೆ. ಆದರೇನು? ಮೋಸ ಬಯಲು ಮಾಡಲು ರಾಚಪ್ಪನಿಗೆ ಸಾಧ್ಯವಿಲ್ಲ. ಇಂತಹ ಅದೆಷ್ಟು ರಾಚಪ್ಪಗಳು ನಮ್ಮಲ್ಲಿದ್ದಾರೆ ಮತ್ತು ಇದ್ದರು.

ನಮ್ಮಲ್ಲಿ ಓದು-ಬರಹ ಗೊತ್ತಿಲ್ಲದವ ನಗರ ಅಥವಾ ಪಟ್ಟಣದ ಮಾರುಕಟ್ಟೆಗೆ ಹೋದಾಗ ಏನಾಗುತ್ತದೆ? ಬಸ್ ಹೋಗುವ ಸ್ಥಳ, ಅಂಗಡಿಯ ಹೆಸರು, ಬೋರ್ಡಿನ ಮೇಲೆ ಬರೆದಿರುವ ಬೆಲೆಗಳ ವಿವರ, ಪಡಿತರ ಚೀಟಿಯಲ್ಲಿ ನಮೂದಿಸಿರುವ ವಿವಿಧ ಧಾನ್ಯಗಳ ಪ್ರಮಾಣ, ಕೊಳ್ಳುವ ವಸ್ತುಗಳ ಮೇಲೆ ಅಂಟಿಸಿರುವ ಚೀಟಿಯಲ್ಲಿನ ವಿವರಗಳು



2

ಮುಂತಾದವನ್ನು ತಿಳಿದುಕೊಳ್ಳುವುದು ಆತನಿಗೆ ಕಷ್ಟ. ಒಂದು ವೇಳೆ ಬಸ್ಸು ಹತ್ತಬೇಕು, ಎಲ್ಲಿ ಇಳಿಯಬೇಕು ಹಾಗೂ ಯಾವ ಅಂಗಡಿಗೆ ಹೋಗಬೇಕೆಂಬುದನ್ನು ಅನುಭವದಿಂದ ತಿಳಿದುಕೊಂಡಿರುತ್ತಾನೆ. ಆದರೆ ಆತ ಹೊಸ ಊರುಗಳಿಗೆ, ಹೊಸ ಸ್ಥಳಗಳಿಗೆ ಹೋದರೆ, ಇವೆಲ್ಲ ವಿವರ ತಿಳಿಯುವುದು ತುಂಬ ಕಷ್ಟ. ಆದ್ದರಿಂದ ಆತ ಹೊಸ ಸ್ಥಳಗಳಿಗೆ ಹೋಗುವ ಸಾಹಸವನ್ನೇ ಮಾಡುವುದಿಲ್ಲ. ತನ್ನ ಮಗನ ಕಾಯಿಲೆಗೆ ಬೇಕಾದ ಹೊಸ ಔಷಧಿ ಅಥವಾ ತನ್ನ ಹೊಲದಲ್ಲಿನ ಬೆಳೆಗಳಿಗೆ ಬೇಕಾದ ಕೀಟನಾಶಕವನ್ನು ಕೊಳ್ಳುವ ಸಾಹಸ ಮಾಡುವುದು ಆತನಿಗೆ ದೊಡ್ಡ ಸಮಸ್ಯೆಯಾಗುತ್ತದೆ. ಬರವಣಿಗೆ ಆತನಿಗೆ ಪ್ರಮುಖವಾದ ಎಚ್ಚರಿಕೆಯ ಬೋರ್ಡು ಆಗಲೀ ಅಥವಾ ಅಗತ್ಯವಾದ ಸೂಚನೆಯಾಗಲೀ ಅರ್ಥವೇ ಆಗುವುದಿಲ್ಲ.

ನಮ್ಮಲ್ಲಿ ಓದು-ಬರಹ ಬರದೆ ಇರುವವರು ಯಾರೂ ಸಹ ಪತ್ರವನ್ನು ಓದಲು ಅಥವಾ ಬರೆಯಲು ಇಚ್ಛೆ ಇಲ್ಲದವರೇನಲ್ಲ. ನಮಗೆ ಪ್ರಿಯವಾದ ವಿಷಯವನ್ನು ಓದಿ ಹೇಳಲು ಮತ್ತು ಇಷ್ಟವಾದ ವ್ಯಕ್ತಿಗೆ ಪತ್ರ ಬರೆದುಕೊಡಲು ಒಬ್ಬ ವ್ಯಕ್ತಿಯನ್ನು ಹುಡುಕುವುದು ತುಂಬ ಕಷ್ಟದ ಕೆಲಸ. ನಮ್ಮ ಹೆಂಡತಿ ಅಥವಾ ಗಂಡ ಅಥವಾ ಮಕ್ಕಳು ಬರೆದ ವೈಯಕ್ತಿಕ ಪತ್ರ, ಸ್ಥಳೀಯ ಸಂಸ್ಥೆಗೆ ಒಂದು ಮನವಿ ಪತ್ರ, ಸಾಲ ಪಡೆಯಲು ಒಂದು ಅರ್ಜಿ, ಬರೆಯಲು ಅಥವಾ ನಮ್ಮ ಸಹಿ ಹಾಕುವುದಕ್ಕೆ ಬರೆಯಲು ಮತ್ತು ಓದಲು ಬರದಿದ್ದಾಗ ನಮಗೆ ಅದೆಷ್ಟು ಮುಜುಗರವಾಗುತ್ತದೆ.

ಓದು ಬರಹ ಬರದಿದ್ದಲ್ಲಿ ನಾವೆಲ್ಲ ಅಪೂರ್ಣ ವ್ಯಕ್ತಿಗಳು, ನಮಗೆ ಪತ್ರ ಬರೆಯುವ ಅಗತ್ಯವಿಲ್ಲದಿದ್ದರೂ ಅಥವಾ ಸಾಲಕ್ಕೆ ಅರ್ಜಿ ಹಾಕಬೇಕಾಗಿಲ್ಲದಿದ್ದರೂ ಓದು-ಬರಹ ಅಂದರೆ ಅಕ್ಷರ ಜ್ಞಾನವಿಲ್ಲದಿದ್ದರೆ ನಾವು ಅಪೂರ್ಣರು ಎಂಬ ಅರಿವು ನಮಗಿದೆ. ಅಕ್ಷರಗಳನ್ನು ಓದುವ ಮತ್ತು ಬರೆಯುವ ಜ್ಞಾನ ಅಂದರೆ ಸಾಕ್ಷರತೆ ಬೇಕೆಂದು ನಮಗೆ ಒಬ್ಬ ಪಂಡಿತ ಬಂದೇನು ತಿಳಿಸಬೇಕಾಗಿಲ್ಲ. ನಮ್ಮಲ್ಲಿ ಅನೇಕರಿಗೆ ಸ್ವತಃ ತಿಳಿಯುತ್ತೆ. ಇಷ್ಟಾದರೂ ನಮ್ಮ ದೇಶದಲ್ಲಿ ಓದು-ಬರಹ ಗೊತ್ತಿಲ್ಲದವರು, ಅನಕ್ಷರಸ್ಥರು ಕೋಟಿಗಟ್ಟಲೆ ಇದ್ದಾರೆ. ಭಾರತದಲ್ಲಿರುವ ಅನಕ್ಷರಸ್ಥರ ಸಂಖ್ಯೆಯು ಜಗತ್ತಿನ ಬೇರೆಲ್ಲ ರಾಷ್ಟ್ರಗಳ ಸಂಖ್ಯೆಗಿಂತ ಜಾಸ್ತಿ.

ನಮ್ಮ ದೇಶದಲ್ಲಿ ಇಷ್ಟು ಅಗಾಧ ಸಂಖ್ಯೆಯ ಅನಕ್ಷರಸ್ಥರು ಇರುವುದಾದರೂ ಏಕೆ? ಅತ್ಯಂತ ಪ್ರತಿಭಾವಂತರಾದ ಕೆಲವು ಕವಿಗಳಿಗೆ



ಮತ್ತು ಜ್ಞಾನಿಗಳಿಗೆ ನಮ್ಮ ದೇಶ ಜನ್ಮ ನೀಡಿದೆ. ರವೀಂದ್ರನಾಥ ಟಾಗೂರ್, ಸುಬ್ರಮಣ್ಯ ಭಾರತಿ, ಕುವೆಂಪು, ಬೇಂದ್ರೆ ಮುಂತಾದವರ ಹೆಸರುಗಳನ್ನು ಕೇಳದವರ್ಯಾರು? ನಮ್ಮ ನಾಡಿನ ಸಾಹಿತ್ಯ ಪ್ರಕಾರಗಳಲ್ಲಿ ಸಾಕ್ಷರತೆಯ ಬಗ್ಗೆ ಹೆಗ್ಗಳಿಕೆಯ ಮಾತುಗಳಿವೆ. 'ಜ್ಞಾನವು ಒಂದು ಅಸ್ತ್ರ'ವೆಂದು ತಮಿಳು ಕವಿ ತಿರುವಳ್ಳುವರ್ ಹೇಳಿದ್ದಾರೆ. ''ನೀನು ಒಬ್ಬ ಬಡವನಿಗೆ ಅಕ್ಷರ ಜ್ಞಾನ ಕಲಿಸುವುದರಿಂದ ನಿನಗೆ ಸಾವಿರ ಅನ್ನ ಛತ್ರಗಳನ್ನು ಕಟ್ಟಿಸಿದುದಕ್ಕಿಂತ ಹೆಚ್ಚಿನ ಪುಣ್ಯ ಲಭಿಸುತ್ತದೆ.'' ಎಂದು ಕವಿ ಸುಬ್ರಮಣ್ಯ ಭಾರತಿ ಹಾಡಿದ್ದಾರೆ. ''ಕಲಿಯದೆ ಇರುವವರ ಮನೆ ಅಂಧಕಾರ ತುಂಬಿದ ಮನೆ'' ಎಂದು ಭಾರತಿ ದಾಸನ್ ಹೇಳಿದ್ದಾರೆ.

## ಬರವಣಿಗೆ ಹುಟ್ಟು

ಪ್ರಪಂಚದಲ್ಲಿರುವ ಅತ್ಯಂತ ಪ್ರಾಚೀನ ಬರಹಗಳಲ್ಲಿ ಒಂದು ಭಾರತದ ಮೊಹೆಂಜದಾರೊ ಮತ್ತು ಹರಪ್ಪ. ನಾಗರಿಕತೆಯ ಅವಶೇಷಗಳಲ್ಲಿ ಕಂಡುಬರುತ್ತದೆ. ಭಾರತೀಯರಿಗೆ ಸುಮಾರು 4000 ವರ್ಷಗಳ ಹಿಂದೆಯೇ ಬರೆಯುವುದು ಮತ್ತು ಓದುವುದು ಗೊತ್ತಿತ್ತು. ಸರಿಸುಮಾರು ಅದೇ ಕಾಲದಲ್ಲಿ ಪ್ರಾಚೀನ ಹಾಗೂ ಬಲಿಷ್ಠ ನಾಗರಿಕತೆಗಳು ಬ್ಯಾಬಿಲೋನ್ ಮತ್ತು ಈಜಿಪ್ಟ್‌ನಲ್ಲಿದ್ದವು. ಆಮೇಲೆ ಚೀನಾದಲ್ಲಿಯೂ ಪ್ರಾಚೀನ ನಾಗರಿಕತೆ ಬೆಳೆದುಬಂತು. ಮಾನವನ ಇತಿಹಾಸದಲ್ಲಿ ಇವು ಮೊದಲು ಬೆಳೆದು ಬಂದ ನಾಗರಿಕತೆಗಳು. ಇವುಗಳಿಗೆ ಒಂದೇ ರೀತಿಯ ಅನೇಕ ಗುಣಲಕ್ಷಣಗಳಿದ್ದವು. ಅವುಗಳಲ್ಲಿ ಬರಹವಿರುವ ಭಾಷೆಯ ಬೆಳವಣಿಗೆಯೂ ಒಂದು ಪ್ರಮುಖ ಗುಣಲಕ್ಷಣ.

3

ಪಶುವಿನ ಹಂತದಿಂದ ಮಾನವನಾಗಿ ವಿಕಾಸವಾಗುವುದಕ್ಕೆ ಸಾವಿರಾರು ವರ್ಷಗಳೇನು, ಲಕ್ಷಾಂತರ ವರ್ಷಗಳೇ ಬೇಕಾದವು. ಈ ಲಕ್ಷಾಂತರ ವರ್ಷಗಳಲ್ಲಿ ಮನುಷ್ಯ, ಗೆಡ್ಡೆ ಗೆಣಸುಗಳನ್ನು ಅಗೆಯಲು, ಹಣ್ಣುಗಳನ್ನು ಕೀಳಲು, ಬೇಟೆಯಾಡಲು ಮತ್ತು ತನ್ನನ್ನು ತಾನು ರಕ್ಷಿಸಿಕೊಳ್ಳಲು ಅನೇಕ ಉಪಕರಣಗಳನ್ನು ತಯಾರಿಸುವುದನ್ನೂ ಕಲಿತನು. ಅನಂತರ ವ್ಯವಸಾಯದಿಂದ ತನಗೆ ಬೇಕಾದ ಆಹಾರ ಬೆಳೆಯಲು ಮತ್ತು ದನಕರುಗಳನ್ನು ಸಾಕಲು ಬೇಕಾದ ಉಪಕರಣಗಳನ್ನು ಅಭಿವೃದ್ಧಿಪಡಿಸಿಕೊಂಡನು. ಅಲ್ಲದೆ ಚಳಿಯಿಂದ ಮತ್ತು ಇತರೆ ಮೃಗಗಳಿಂದ ರಕ್ಷಣೆ ಪಡೆಯಲು ಹಾಗೂ ಆಹಾರ ಬೇಯಿಸಲು ಬೆಂಕಿಯನ್ನು ಉಪಯೋಗಿಸಲು ಕಲಿತು; ಅನಂತರ



ಬೆಂಕಿಯಿಂದ ಲೋಹದ ಉಪಕರಣಗಳನ್ನು ತಯಾರಿಸುವುದಕ್ಕೆ ಪ್ರಾರಂಭಿಸಿದ. ಪರಸ್ಪರ ವಿಷಯವನ್ನು ಮತ್ತು ಜ್ಞಾನವನ್ನು ವಿನಿಮಯ ಮಾಡಿಕೊಳ್ಳಲು ಆತ ಭಾಷೆಯನ್ನು ಅಭಿವೃದ್ಧಿಪಡಿಸಿಕೊಂಡನು. ಇವೆಲ್ಲವುಗಳಿಂದ ಮನುಷ್ಯನು ಪ್ರಕೃತಿಯನ್ನು ಪರಿವರ್ತಿಸಲು ಸಾಧ್ಯವಾಯಿತು ಹಾಗೂ ಪ್ರಕೃತಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಲು ಇವು ಸಹಾಯವಾದವು.

ಮನುಷ್ಯನು ಬರಹವನ್ನು ಅಭಿವೃದ್ಧಿಪಡಿಸಿದ ನಂತರ ಎಲ್ಲ ಜ್ಞಾನವನ್ನು ಕ್ರೋಢೀಕರಿಸಲು, ಸಂಗ್ರಹ ಮಾಡಲು, ಇತರರೊಡನೆ ಸಂವಹಿಸಲು ಮತ್ತು ಎಲ್ಲರೊಡನೆ ಜ್ಞಾನವನ್ನು ಒಗ್ಗೂಡಿಸಲು ಹಾಗೂ ಅದನ್ನು ಬರವಣಿಗೆಯ ರೂಪಕ್ಕೆ ಪರಿವರ್ತಿಸುವುದು ಅವನಿಗೆ ಸಾಧ್ಯವಾಯಿತು. ಬರವಣಿಗೆಯಿಂದ ಜ್ಞಾನವನ್ನು ಹಂಚಲು ಬದುಕಿರುವ ವ್ಯಕ್ತಿಗಳಿಗೆ ಸಾಧ್ಯವಾಗುವಂತೆ, ಮುಂದಿನ ಹಲವಾರು ಪೀಳಿಗೆಗಳಿಗೂ ಜ್ಞಾನವನ್ನು ಬರೆದಿರುವ ಗ್ರಂಥವನ್ನು ಓದಿ ಸಂಗ್ರಹಿಸುವ ಸಾಮರ್ಥ್ಯ ಮನುಷ್ಯನದಾಯಿತು. ಹಿಂದಿನ ತಲೆಮಾರಿನವರು ಸಂಗ್ರಹಿಸಿದ ಜ್ಞಾನ ತಿಳಿಯಲು ಸಾಧ್ಯವಾಯಿತು. ಆದ್ದರಿಂದ ಮನುಷ್ಯನ ಜ್ಞಾನ ಸಂಪತ್ತು ಅಗಾಧವಾಗಿ ಬೆಳೆಯಿತು. ಈ ರೀತಿ ಜ್ಞಾನ ಸಂಪತ್ತು ಅಗಾಧವಾಗಿ ಬೆಳೆಯಿತು. ಈ ರೀತಿ ಜ್ಞಾನ ಒಗ್ಗೂಡುವುದರಿಂದಲೇ ಮನುಷ್ಯನ ನಾಗರಿಕತೆ ವಿಕಾಸವಾಗಲು ಸಾಧ್ಯವಾಯಿತು. ಮನುಷ್ಯನು ಪಶುವಿನ ಹಂತದಿಂದ ನಾಗರಿಕ ಮಾನವನಾಗಿ ಪರಿವರ್ತನೆ ಹೊಂದಲು ಸಾಕ್ಷರತೆಯು ಸಹಾಯ ಮಾಡಿದೆಯೆನ್ನುವುದು ನಿರ್ವಿವಾದ.

ಸಹಸ್ರಾರು ವರ್ಷಗಳಿಂದ ಸಂಗ್ರಹವಾಗಿರುವ ಮಹತ್ವದ ಜ್ಞಾನ ಸಂಪತ್ತು ಪುಸ್ತಕ ಪ್ರಪಂಚದಲ್ಲಿ ಅಡಗಿದೆ. ಈಗಲೂ ಸಹ ಜ್ಞಾನವು ಪುಸ್ತಕರೂಪದಲ್ಲಿ ಸಂಗ್ರಹವಾಗುತ್ತಲೇ ಇದೆ. ಪುಸ್ತಕಗಳಲ್ಲಿರುವ ಹೆಚ್ಚಿನ ಪ್ರಮಾಣದಲ್ಲಿ ಜ್ಞಾನವು ಜನಗಳಿಂದಲೇ ಸಂಗ್ರಹವಾಗಿದೆ. ಸಾಮಾನ್ಯ ಶ್ರಮಿಕರು ಅಂದರೆ ನಿಮ್ಮಂತಹ ರೈತ, ಕರಕುಶಲಕರ್ಮಿ, ಕಾರ್ಮಿಕ ಮುಂತಾದವರು ಜೀವನದ ಅಗತ್ಯಗಳನ್ನು ಪೂರೈಸಲು ದಿನನಿತ್ಯ ಹೋರಾಡುವ ಸಂದರ್ಭದಲ್ಲಿ ಪ್ರಕೃತಿಯ ಬಗ್ಗೆ ಹೆಚ್ಚು ಅರಿತರು ಹಾಗೂ ತಮಗೆ ಅನುಕೂಲವಾಗುವಂತೆ ಪ್ರಕೃತಿಯನ್ನು ಪರಿವರ್ತಿಸುವ ಅನೇಕ ವಿಧಾನಗಳನ್ನು ರೂಪಿಸಿದರು. ಅಂತಹ ಜ್ಞಾನ ಸಂಪತ್ತನ್ನು ಓದು-ಬರಹ ತಿಳಿದವರು ಸಂಗ್ರಹಿಸಿದರು. ಲಿಖಿತ ರೂಪಕ್ಕೆ ಇಳಿಸಿದರು ಹಾಗೂ ಉಪಯೋಗಿಸಿದರು.




5

# ಭಾರತದಲ್ಲಿನ ಅನಕ್ಷರತೆಗೆ ಕಾರಣಗಳು

ಈ ಜ್ಞಾನ ಸಂಗ್ರಹದ ಹೆಚ್ಚಿನ ಭಾಗ, ಈ ವಿಸ್ಮಯಕಾರಿ ಸಂಪತ್ತಿನ ಸಂಗ್ರಹ, ನಮ್ಮ ನಾಡಿನ ಬಹುತೇಕ ಜನರಿಗೆ ಇಂದು ದೊರಕುವುದು ಸಾಧ್ಯವಿಲ್ಲ. ಏಕೆಂದರೆ ಈ ಜ್ಞಾನ ಸಂಗ್ರಹದ ಕೊಠಡಿಯ ಬೀಗವನ್ನು ತೆಗೆಯಲು ಬೇಕಾದ ಉಪಕರಣ - ಅಂದರೆ ಸಾಕ್ಷರತೆ ಅವರಲ್ಲಿಲ್ಲ. ಇದಕ್ಕೆ ಕಾರಣಗಳೇನು? ಈ ದೇಶದಲ್ಲಿ ಅನೇಕ ಶತಮಾನಗಳವರೆಗೆ ಕಲಿಯುವುದು ಕೇವಲ ಬಲ್ಲಿದರಿಗೆ, ಮೇಲ್ಜಾತಿಯರಿಗೆ ಹಾಗೂ ಅವರ ಪಂಡಿತರು ಮತ್ತು ಲಿಪಿಗಾರರಿಗೆ ಮಾತ್ರ ಸೀಮಿತವಾಗಿತ್ತು. ಬಾಯಿಂದ ಬಾಯಿಗೆ ಬಂದ ಮೌಖಿಕ ಜ್ಞಾನವನ್ನು ಮಾತ್ರ ಬಹುಸಂಖ್ಯಾತರಾಗಿದ್ದ ಬಡವರು ಅವಲಂಬಿಸಬೇಕಾಗಿತ್ತು. ತಮ್ಮೆಲ್ಲ ಪ್ರಜೆಗಳಿಗೆ ಶಿಕ್ಷಣ ನೀಡುವ ಅಗತ್ಯ ಒಂದೆರಡು ಅಪವಾದಗಳ ಹೊರತು ಮಿಕ್ಕೆಲ್ಲ ಚಕ್ರವರ್ತಿಗಳು ಮತ್ತು ರಾಜರುಗಳಿಗೆ ಕಂಡು ಬರಲಿಲ್ಲ. ಅಂದು ಅಸ್ತಿತ್ವದಲ್ಲಿದ್ದ ಶಾಲೆಗಳು ಕೆಲವೇ ಮಂದಿಗೆ ಶಿಕ್ಷಣ ನೀಡುತ್ತಿದ್ದವು.

ಬ್ರಿಟಿಷರು ತಮ್ಮ ಸೀಮಿತ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹೊಸ ಶಿಕ್ಷಣವನ್ನು ಜಾರಿಗೆ ತಂದರು. ಅದೂ ಸಹ ಪರಿಮಿತವಾದ ಕ್ಷೇತ್ರದಲ್ಲಿ ಹಾಗೂ ಬಹು ಮಟ್ಟಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಅವರು ಶಿಕ್ಷಣ ನೀಡಿದರು. ಎಲ್ಲ ಜನರ ಸಾಕ್ಷರತೆ ಮತ್ತು ಶಿಕ್ಷಣವು ಎಂದಿಗೂ ಆಳುವವರ ಆದ್ಯತೆಯ ಕೆಲಸವಾಗಿರಲಿಲ್ಲ. ಏಕೆಂದರೆ ಓದು-ಬರಹ ಬರುವ ಬಡಜನರು ತಮ್ಮ ಹಕ್ಕುಗಳೇನು ಎಂಬುದನ್ನು ತಿಳಿದುಕೊಳ್ಳುತ್ತಾರೆ ಹಾಗೂ ತಮ್ಮ ಪ್ರತಿಭಟನೆ ವ್ಯಕ್ತಪಡಿಸಲು ಮಾರ್ಗಗಳನ್ನು ಅರಸುತ್ತಾರೆ. ಹಕ್ಕುಗಳನ್ನು ಕೇಳುವ ಹಾಗೂ ಪ್ರತಿಭಟಿಸುವವರನ್ನು ನಿವಾರಿಸಲು ಆಳುವವರೆಲ್ಲರಿಗೆ ತುಂಬ ಆಸಕ್ತಿಯಲ್ಲವೇ?

ಬ್ರಿಟಿಷರ ಒತ್ತಾಸೆಗಳೇನಿದ್ದರೂ ಅವರು ನೀಡಿದ ಅಂತಹ ಸೀಮಿತವಾದ ಶಿಕ್ಷಣವೂ ಸಹ ಪ್ರಭಾವವನ್ನು ಬೀರಿ ಸ್ವಾತಂತ್ರ್ಯ ಹೋರಾಟ ಬೆಳೆದು ಬಂತು ಮತ್ತು ಶಿಕ್ಷಣ ಪದ್ಧತಿಯನ್ನು ಸಾರ್ವತ್ರಿಕಗೊಳಿಸುವ ಮಹದಾಸೆಯೂ ನಮ್ಮಲ್ಲಿ ಉಂಟಾಯಿತು. ಹೀಗಾಗಿ ಸ್ವಾತಂತ್ರ್ಯ ಬಂದ ನಂತರ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿತು. ಆದರೆ ಈ ಪ್ರೋತ್ಸಾಹ ಬಹಳ ಕಾಲ ಉಳಿಯಲಿಲ್ಲ. ನಿಜವಾಗಿಯೂ ಶಿಕ್ಷಣ ಬೆಳೆಯಬೇಕಾಗಿದ್ದ ಪ್ರಮಾಣದಷ್ಟು ಬೆಳೆಯಲಿಲ್ಲ. ಅಗತ್ಯವಿರುವ ಶಿಕ್ಷಣಕ್ಕೂ ಮತ್ತು ಇಂದು ಸರ್ಕಾರ




ನೀಡುತ್ತಿರುವ ಶಿಕ್ಷಣಕ್ಕೂ ಅಗಾಧವಾದ ವ್ಯತ್ಯಾಸವಿದೆ. ವರ್ಷಗಳು ಉರುಳಿದಂತೆ ಶಿಕ್ಷಣದ ವಿಸ್ತರಣೆಯೂ ನಿಧಾನಗತಿಯಲ್ಲಿ ಸಾಗುತ್ತಿದೆ.

ಸ್ವಾತಂತ್ರ್ಯ ಬಂದು ನಲವತ್ತನಾಲ್ಕು ವರ್ಷಗಳಾಗಿವೆ. ಓದು-ಬರಹ ಬರದ ವಯಸ್ಕರ ಸಂಖ್ಯೆ ಸುಮಾರು 40 ಕೋಟಿಯಷ್ಟಿದೆ. ಈ ಅಗಾಧ ಪ್ರಮಾಣದ ಅನಕ್ಷರತೆಗೆ ಕಾರಣಗಳು ಹಲವಾರು. ಈ ಕಾರಣಗಳನ್ನು ಸುಲಭವಾಗಿ ಗುರುತಿಸಿ ಪಟ್ಟಿ ಮಾಡಬಹುದು.

ಅನೇಕ ಸ್ಥಳಗಳಲ್ಲಿ ಶಾಲೆಗಳ ಸಂಖ್ಯೆ ತುಂಬ ಕಡಿಮೆ. ಇರುವ ಶಾಲೆಗಳಲ್ಲೂ ಅನೇಕವಕ್ಕೆ ಮಾಸ್ತರು ಇರುವುದಿಲ್ಲ ಅಥವಾ ಒಬ್ಬರೇ ಮಾಸ್ತರಿರುತ್ತಾರೆ. ಅನೇಕ ಶಾಲೆಗಳಿಗೆ ಕಟ್ಟಡವೇ ಇರುವುದಿಲ್ಲ. ಆದ್ದರಿಂದ ಮಾಸ್ತರು ಇದ್ದರೂ ಸಹ, ಇಂದಿನ ಶಿಕ್ಷಣ ನಿರಾಸಕ್ತಿ ಉಂಟು ಮಾಡುವಂತಿರುತ್ತದೆ ಅಥವಾ ಅಪೂರ್ಣವಾದುದು ಇಲ್ಲವೇ ಅಸಂಬದ್ಧ.

ಓದಲು ಬೇಕಾದ ಸೌಲಭ್ಯಗಳು ಒಂದು ವೇಳೆ ದೊರಕಿದರೂ ಸಹ, ಕಡುಬಡತನ ಹೆಚ್ಚಿನ ಜನರ ಓದಿಗೆ ಮುಖ್ಯ ಅಡ್ಡಿಯಾಗಿದೆ. ಪುಸ್ತಕ, ಸ್ಲೇಟು, ಬಳಪ, ಬಟ್ಟೆ, ಯೂನಿಫಾರಂ ಮುಂತಾದವನ್ನು ಕೊಳ್ಳಲು ಹಾಗೂ ಶಾಲೆಯ ಫೀಸು ಕಟ್ಟಲು ಹಣ ಎಲ್ಲಿ ಬರಬೇಕು? 'ಉಚಿತ' ಶಿಕ್ಷಣವಿರುವ ಸರ್ಕಾರಿ ಶಾಲೆಯಲ್ಲಿ ಓದುವ ಮಗುವಿಗೂ ಸಹ ಪುಸ್ತಕ, ಪೆನ್ನು ಮುಂತಾದವನ್ನು ಕೊಳ್ಳಲು ಹಣ ಬೇಕೇ ಬೇಕು. ಅಲ್ಲದೆ ಬಡತನವಿರುವ ಸಂಸಾರದ ಮಕ್ಕಳು ಹೊಲಗದ್ದೆಗಳಲ್ಲಿ ಕೆಲಸ ಮಾಡಬೇಕು ಇಲ್ಲವೇ ಮನೆಯಲ್ಲಿ ತಾಯಿಗೆ ಸಹಾಯ ಮಾಡಬೇಕು. ಕೆಲವೊಮ್ಮೆ ಈ ಮಕ್ಕಳು ಪೂರ್ಣಾವಧಿ ಕಾರ್ಮಿಕರಾಗಿ ಬೀಡಿಗಳನ್ನು ಸುತ್ತಬೇಕು, ಬೆಂಕಿ ಪೊಟ್ಟಣಗಳನ್ನು ಸಿದ್ಧಗೊಳಿಸಬೇಕು, ಜಲ್ಲಿ ಜಜ್ಜಬೇಕು ಅಥವಾ ಹೋಟೆಲ್‌ಗಳಲ್ಲಿ ಕೆಲಸ ಮಾಡಬೇಕು. ಆಟಪಾಡುವುದಕ್ಕೂ ಒಂದು ಕ್ಷಣ ಬಿಡುವು ಸಿಗದ ಈ ಮಕ್ಕಳಿಗೆ ಓದು-ಬರಹ ಮತ್ತು ವಿದ್ಯೆಯು ಕೈಗೆಟುಕದು, ಜಮೀನುದಾರನ ದನಕರುಗಳನ್ನು ಕಾಯಲು ಮಕ್ಕಳು ಬೇಕಾಗಿರುವುದರಿಂದ ನಮ್ಮ ದೇಶದ ಅನೇಕ ಮಕ್ಕಳು ಶಾಲೆಗೆ ಹೋಗದಂತೆ ಮಾಡಲು ಜಮೀನುದಾರ ಕಾರಣನಾಗಿದ್ದಾನೆ. ಅಲ್ಲದೆ ಸಾಲ ಮಾಡಿದ ಹಣವನ್ನು ಹಿಂತಿರುಗಿಸಲಾರದೆ ಅನೇಕರು ತಮ್ಮ ಮಕ್ಕಳನ್ನು ಜೀತಕ್ಕೆ ಬಿಡುವುದರಿಂದ, ಆ ಮಕ್ಕಳು ಶಾಲೆಯ ಮುಖವನ್ನೇ ನೋಡುವುದಿಲ್ಲ.



ಕೊಳಕು ತುಂಬಿದ, ಅನಾರೋಗ್ಯಕಾರಿ ಮತ್ತು ಜನದಟ್ಟಣೆಯ ಪ್ರದೇಶಗಳು ಅಲ್ಲಿಯ ಆಳವಾದ ಸಾಮಾಜಿಕ ಸಂಕೋಲೆಗಳು ಮತ್ತು


ಹಿಂದುಳಿದ ಮನೋಭಾವ, ಅಲ್ಲಿಯ ಮಕ್ಕಳ ಮೇಲೆ ಪ್ರಭಾವ ಬೀರಿ ಶಾಲೆಗೆ ಬರುವುದನ್ನು ತಪ್ಪಿಸುತ್ತವೆ. ವಿಶೇಷವಾಗಿ ಹಿಂದುಳಿದ ಹಾಗೂ ತುಳಿತಕ್ಕೊಳಗಾದ ಜನತೆಯ ಮಕ್ಕಳು ಶಾಲೆಗೆ ಬರುವುದನ್ನು ಈ ದುಷ್ಟ ಪರಿಸ್ಥಿತಿ ತಪ್ಪಿಸುತ್ತದೆ. ಒಂದು ವೇಳೆ ಅಂತಹ ಮಕ್ಕಳು ಶಾಲೆಗೆ ಸೇರಿದರೂ ಶೇಕಡ 70ಕ್ಕಿಂತ ಹೆಚ್ಚು ಮಕ್ಕಳು ನಾಲ್ಕನೇ ತರಗತಿ ತಲುಪುವ ಮುನ್ನ ಶಾಲೆ ಬಿಡುತ್ತಾರೆ. ಅನಂತರ ಅವರು ಸಂಪೂರ್ಣವಾಗಿ ಅನಕ್ಷರಸ್ಥರಾಗಿ ಜೀವನ ಸಾಗಿಸುತ್ತಾರೆ.

## ಅನಕ್ಷರಸ್ಥರ ಜ್ಞಾನ

ಹೀಗೆ ಅಂದ ಮಾತ್ರಕ್ಕೆ ಕೋಟಿಗಟ್ಟಲೆ ಇರುವ ಅನಕ್ಷರಸ್ಥರಿಗೆ ಏನೂ ಗೊತ್ತಿಲ್ಲ; ಅವರೆಲ್ಲ ಮೂರ್ಖರು ಅಥವಾ ಇತರರಿಗಿಂತ ಕೀಳು ಎಂದೇನಲ್ಲ. ಜೀವನದ ಅನುಭವ ಮತ್ತು ಮೌಖಿಕ ಸಂಪ್ರದಾಯ (ಇತರರಿಂದ ಕೇಳಿ ತಿಳಿದ ವಿಷಯ)ದಿಂದ ಅನಕ್ಷರಸ್ಥರು ಗಳಿಸಿರುವ ಉಪಯುಕ್ತ ಜ್ಞಾನಸಂಪತ್ತು ಇಂದು ಯಾವ ಶಾಲೆಯಲ್ಲಿಯೂ ದೊರಕುತ್ತಿಲ್ಲ. ಒಬ್ಬ ಬೆಸ್ತನಿಗೆ ಮೀನುಗಳನ್ನು ಹಿಡಿಯಲು, ಬಲೆ ಹೆಣೆಯಲು, ದೋಣಿ ಕಟ್ಟಲು, ಮನೆ ಕಟ್ಟಲು, ಹವಾಮಾನದ ವೈಪರೀತ್ಯವನ್ನು ಗ್ರಹಿಸಲು ಹಾಗೂ ಇತರೆ ಜೀವನದ ಅಗತ್ಯಗಳ ಬಗ್ಗೆ ಸ್ವಂತ ಅನುಭವ ಹಾಗೂ ಮೌಖಿಕ ಸಂಪ್ರದಾಯದಿಂದ ಚೆನ್ನಾಗಿ ತಿಳಿದಿರುತ್ತದೆ. ಯಾವ ಶಾಲೆಗಳೂ ಈ ವಿದ್ಯೆಗಳನ್ನು ಕಲಿಸಲು ಆತನಿಗೆ ಸಹಾಯ ಮಾಡಿಲ್ಲ. ಅಲ್ಲದೆ ಅಕ್ಷರಸ್ಥರಾಗಲೀ ಅಥವಾ ಆ ಕ್ಷೇತ್ರದಲ್ಲಿ ವಿಶೇಷ ಪಾಂಡಿತ್ಯ ಪಡೆದಿರುವವರಾಗಲೀ ಆತನ ರೀತಿ ಮೀನು ಹಿಡಿಯಲು ಮತ್ತು ಬದುಕಿ ಬಾಳಲು ಸಾಧ್ಯವಿಲ್ಲ. ಅಷ್ಟಲ್ಲದೆ ನಮ್ಮ ದೇಶದ ಒಟ್ಟು ಉತ್ಪಾದನೆಯಲ್ಲಿ ಹೆಚ್ಚಿನ ಪಾಲನ್ನು ಅನಕ್ಷರಸ್ಥರೇ ಉತ್ಪಾದಿಸುತ್ತಾರೆ. ಪ್ರಾಯೋಗಿಕ ವಿಧಾನಗಳಲ್ಲಿರುವಂತೆ, ಜೀವನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿಯೂ ಅನಕ್ಷರಸ್ಥರು, ಅಕ್ಷರಸ್ಥರಿಗಿಂತ ಹೆಚ್ಚು ಪ್ರೌಢರು ಮತ್ತು ಬುದ್ಧಿವಂತರು.



ಇಷ್ಟಾಗಿಯೂ ಒಬ್ಬ ಅನಕ್ಷರಸ್ಥ ವ್ಯಕ್ತಿಯು ಅನೇಕ ರೀತಿಯಲ್ಲಿ ತೀವ್ರವಾದ ಅನಾನುಕೂಲಗಳಿಗೆ ಒಳಗಾಗಿರುತ್ತಾನೆ. ಆತ ಏನನ್ನು ಕೇಳುತ್ತಾನೆ ಮತ್ತು ನೋಡುತ್ತಾನೋ ಅಷ್ಟಕ್ಕೆ ಮಾತ್ರ ಆತನ ತಿಳುವಳಿಕೆ ಸೀಮಿತವಾಗಿರುತ್ತದೆ. ಆತ ಬೆಳೆಯುವ ದವಸಧಾನ್ಯಗಳ ಬೆಲೆ ಇಳಿದು, ಆದರಿಂದ ತೀವ್ರ ನಷ್ಟವಾದಾಗ ಅಥವಾ ಅನೇಕ ತಿಂಗಳುಗಳ ಕಾಲ ನದಿಯ ನೀರು ಬತ್ತಿಹೋದಾಗ, ಅವಕ್ಕೆ



ಕಾರಣಗಳನ್ನು ಅರಿಯಲು, ಆತನ ತಿಳುವಳಿಕೆ ಸಾಲದಾಗುತ್ತದೆ. ಕೇವಲ ಜೀವನದ ಅನುಭವಗಳ ಆಧಾರವೊಂದರಿಂದ ಕಾಯಿಲೆ, ಬಡತನ ಮತ್ತು ಕಷ್ಟನಷ್ಟಗಳ ಮೂಲ ಕಾರಣಗಳನ್ನು ತಿಳಿಯಲು ಸಾಧ್ಯವಿಲ್ಲ. ಅಲ್ಲದೆ ತನ್ನನ್ನು ಕಾಡುವ ಸಮಸ್ಯೆಗಳನ್ನು ನಿವಾರಿಸಲು ಒಬ್ಬ ಅನಕ್ಷರಸ್ಥ ದಾರಿ ಹುಡುಕುವ ಸಾಧ್ಯತೆ ತುಂಬ ಕಡಿಮೆ.

## ಪ್ರಜಾಪ್ರಭುತ್ವ ಪಾಲ್ಗೊಳ್ಳುವಿಕೆ

ಇಡೀ ಪ್ರಪಂಚಕ್ಕೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಮನುಷ್ಯ ಬೆಳೆಯಲು ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯಿಂದ ಸಾಧ್ಯವಿದೆ. ಇಂದು ನಮಗೆ ಗೊತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಸಹಾಯದಿಂದ ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯವಿರುವಷ್ಟು ಆಹಾರ, ಬಟ್ಟೆ, ವಸತಿ ಮತ್ತು ಇತರೆ ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸಲು ಸಾಧ್ಯವಿದೆ. ಯಾರೊಬ್ಬರೂ ಉಪವಾಸ ಬೀಳುವ ಅಥವಾ ಬಟ್ಟೆಯಿಲ್ಲದೆ ನಗ್ನನಾಗಿ ತಿರುಗುವ ಅಥವಾ ಮನೆಯಿಲ್ಲದೆ ವಾಸಿಸುವ ಅಗತ್ಯವಿಲ್ಲ. ಆದರೆ ವಸ್ತುಸ್ಥಿತಿಯೇನು? ಕೋಟಿಗಟ್ಟಲೆಯ ಜನ ಉಪವಾಸದಿಂದ ಬಳಲುತ್ತಿದ್ದಾರೆ ಹಾಗೂ ನಿವಾರಿಸಬಹುದಾದ ರೋಗ ರುಜಿನಗಳಿಂದ ನರಳುತ್ತಿದ್ದಾರೆ. ಬಹುಸಂಖ್ಯಾತ ಜನರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ತೀವ್ರವಾದ ಪ್ರಗತಿಯಿಂದ ತಮ್ಮ ಜೀವನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಮತ್ತು ಸುಖಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಅಲ್ಲದೆ ವಿಜ್ಞಾನದ ಪ್ರಗತಿಯ ಅನುಕೂಲಗಳು ತಮಗೆ ಬೇಕೆಂದು ಪ್ರತಿಭಟಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಬಹುಸಂಖ್ಯಾತ ಬಡಜನರ ಪ್ರಗತಿಗಾಗಿ ಸರಕಾರ, ಸರಕಾರೇತರ ಗುಂಪುಗಳು ಮತ್ತು ಸ್ವತಃ ಜನರೇ ಹಲವಾರು ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಯಾವುದೇ ಪ್ರಗತಿಯ ಪ್ರಯತ್ನದ ಯಶಸ್ವಿಗೆ ಜನರೆಲ್ಲರ ಪೂರ್ಣ ಸಹಕಾರ ಮತ್ತು ಭಾಗವಹಿಸುವಿಕೆ ತುಂಬಾ ಮುಖ್ಯ. ಅನಕ್ಷರಸ್ಥರಿರುವ ದೇಶ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ, ಏಕೆಂದರೆ ಅನಕ್ಷರತೆಯು ಜನರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ತಡೆಯುತ್ತದೆ.

ಪ್ರಗತಿಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಜನರು ಭಾಗ ವಹಿಸುವುದರ ಜೊತೆಗೆ, ಅಂತಹ ಕಾರ್ಯಕ್ರಮ ಹಾಗೂ ಯೋಜನೆಯ ನೀತಿ ನಿಯಮಗಳನ್ನು ರೂಪಿಸುವಲ್ಲಿಯೂ ಸಕ್ರಿಯವಾಗಿ ಭಾಗವಹಿಸುವುದು ಅವಶ್ಯ. ಆ ರೀತಿ ನಡೆದಾಗ ಮಾತ್ರ



ಯೋಜನೆಯ ಉದ್ದೇಶಗಳು ಸರಿಯಾಗಿ ಈಡೇರಲು ಸಾಧ್ಯವೆಂಬುದನ್ನು ಇತಿಹಾಸ ತೋರಿಸಿದೆ. ಇಲ್ಲವಾದರೆ ಪ್ರಗತಿಯ ಕಾರ್ಯಗಳು ಜನಸಾಮಾನ್ಯರ ಮೇಲೆ ಮತ್ತಷ್ಟು ಹೊರೆಯಾಗುತ್ತವೆ ಮತ್ತು ಕೆಲವು ಹಿತಾಸಕ್ತಿಗಳಿಗೆ ಜನರನ್ನು ಮತ್ತೆ ಶೋಷಿಸಲು ಇವು ಅಸ್ತ್ರಗಳಾಗುತ್ತವೆ. (ಸ್ಥಳೀಯ ಉದಾಹರಣೆಗಳನ್ನು ನೀಡಿ) ಯೋಜನೆ ಹಾಗೂ ನೀತಿ ನಿಯಮಗಳನ್ನು ರೂಪಿಸಲು ಮತ್ತು ನಿಯಂತ್ರಿಸಲು ಜನ ಸಾಮಾನ್ಯರು ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರುತ್ತದೆ. ಆದರೆ ಪ್ರಜಾಪ್ರಭುತ್ವದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರತಿಯೊಬ್ಬ ಪ್ರಜೆ, ತನ್ನ ಸ್ವಂತ ಅನುಭವಕ್ಕೆ ಮೀರಿದ ಜ್ಞಾನವನ್ನು ಹೊಂದಿರುವುದು ಅಗತ್ಯ. ಆದ್ದರಿಂದ ಸಾರ್ವತ್ರಿಕ ಸಾಕ್ಷರತೆ ಬರದೆ ನಿಜವಾದ ಪ್ರಜಾಪ್ರಭುತ್ವ ಹಾಗೂ ಅರ್ಥಪೂರ್ಣವಾದ ಪ್ರಜಾಪ್ರಭುತ್ವ ಸಾಧ್ಯವಿಲ್ಲ.


## ಕ್ರಿಯಾತ್ಮಕ ಸಾಕ್ಷರತೆ

ಓದು-ಬರಹ ಕಲಿಯುವುದೊಂದೇ ಸಾಲದು ಎಂಬುದನ್ನು ನಾವು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ತಮ್ಮ ಜೀವನದ ದುರವಸ್ಥೆಯ ಕಾರಣಗಳು ಅಕ್ಷರಸ್ಥರಿಗಿಂತ ಅನಕ್ಷರಸ್ಥರಿಗೆ ಹೆಚ್ಚು ಗೊತ್ತಿರುತ್ತದೆ. ನಮ್ಮಲ್ಲಿ ವಿದ್ಯಾವಂತ ಯುವಕ ನಿರುದ್ಯೋಗಿಗಳು ಲಕ್ಷಾಂತರ ಮಂದಿಯಿದ್ದಾರೆ. ಉದ್ಯೋಗವಿಲ್ಲದೆ, ಅವರ ಜೀವನದ ಅತ್ಯಂತ ಹೆಚ್ಚು ಸೃಜನಶೀಲ ಹಾಗೂ ಉತ್ಪಾದನಾ ಸಾಮರ್ಥ್ಯದ ವರ್ಷಗಳು ವ್ಯರ್ಥವಾಗಿ ಹೋಗುತ್ತಿವೆ. ಈ ಯುವಕರಿಗೆ ತಮ್ಮ ನಿರುದ್ಯೋಗದ ಮೂಲ ಕಾರಣಗಳು ತಿಳಿದಿವೆಯೇ? ವಿಪರ್ಯಾಸದ ಸಂಗತಿಯೆಂದರೆ ಇಂದು ಬಹುತೇಕ ಯುವಕರು ಎಲ್ಲ ರೀತಿಯ ವಿಚ್ಛಿದ್ರಕಾರಿ ಶಕ್ತಿಗಳ, ಜಾತಿವಾದಿಗಳ ಹಾಗೂ ಲಾಭಬಡುಕ ಕೋರರ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ದುಷ್ಟ ಶಕ್ತಿಗಳು ಯುವಕರನ್ನು ದಾರಿ ತಪ್ಪಿಸುತ್ತಿವೆ, ನಿರುದ್ಯೋಗದ ಮೂಲ ಕಾರಣಗಳು ಗೋಚರವಾಗದಂತೆ ಮಾಡುತ್ತಿವೆ ಹಾಗೂ ಯುವಕರು ತಮ್ಮ ತಮ್ಮಲ್ಲಿ ಕಿತ್ತಾಡುವಂತೆ ಪ್ರಚೋದಿಸಿ ಯುವಶಕ್ತಿಯನ್ನು ಹಾಳುಮಾಡುತ್ತಿವೆ.

ಓದು-ಬರಹ ಕಲಿಯುವುದೊಂದೇ ನಿಜವಾದ ಸಾಕ್ಷರತೆಯಲ್ಲ. ತನ್ನನ್ನು ತಾನು ಅರಿತುಕೊಳ್ಳುವಂತೆ ಹಾಗೂ ವಿಶ್ವದಲ್ಲಿ ತನ್ನ ಸ್ಥಾನ ತಿಳಿಯುವಂತೆ ಮಾಡುವುದೇ ನಿಜವಾದ ಸಾಕ್ಷರತೆ. ಮನುಷ್ಯ ಜನಾಂಗದ ಎಲ್ಲ ಸದಸ್ಯರು ಸಮಾನ ಭ್ರಾತೃತ್ವ ಹೊಂದುವಂತೆ







ಮಾಡುವ ಮತ್ತು ಮಾನವ ಕಲ್ಯಾಣಕ್ಕಾಗಿ ಸಾಗಬೇಕಾದ ದಾರಿಯನ್ನು ತಿಳಿಯುವಂತೆ ಮಾಡುವುದು ನಿಜವಾದ ಸಾಕ್ಷರತೆ. ನಮ್ಮನ್ನು ಕಾಡುತ್ತಿರುವ ಸಮಸ್ಯೆ, ತೊಂದರೆ ಹಾಗೂ ಸಂಕಷ್ಟಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಂತೆ ಅರಿವು ನೀಡುವುದು ನಿಜವಾದ ಸಾಕ್ಷರತೆ. ನಮ್ಮ ಜೀವನವನ್ನು ಉತ್ತಮಗೊಳಿಸಲು ಸಾಧ್ಯವೆಂಬುದನ್ನು ತಿಳಿಸಿಕೊಡುವುದೇ ನಿಜವಾದ ಸಾಕ್ಷರತೆಯ ಪ್ರಮುಖ ಉದ್ದೇಶ. ಈ ರೀತಿಯ ತಿಳುವಳಿಕೆ ಬರುವಂತೆ ಮಾಡುವ ವಿಧಾನಕ್ಕೆ ನಾವು ಆಚಾರಾರ್ಥಕ ಸಾಕ್ಷರತೆ ಅಥವಾ ಕ್ರಿಯಾತ್ಮಕ ಸಾಕ್ಷರತೆ ಎಂದು ಕರೆಯುತ್ತೇವೆ.

ಒಬ್ಬ ವ್ಯಕ್ತಿ ಕ್ರಿಯಾತ್ಮಕ ಅಕ್ಷರಸ್ಥನಾಗಲು ಓದು-ಬರಹವನ್ನು ಕಲಿಯುವುದು ಅಗತ್ಯ. ಆಗ ಮಾತ್ರ ಆತನಿಗೆ ಸ್ವಯಂ ಅಧ್ಯಯನ ಮಾಡಲು ಮತ್ತು ಸ್ವಾವಲಂಬನೆ ಗಳಿಸಲು ಸಾಧ್ಯ. ದಿನಪತ್ರಿಕೆ, ವಾರಪತ್ರಿಕೆ, ಮಾಸಿಕಗಳು ಹಾಗೂ ಪುಸ್ತಕಗಳ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಆತನಿಗೆ ಅವಕಾಶಗಳಿರಬೇಕು. ಇದರಿಂದ ಅವನು ತನ್ನ ಸುತ್ತಲಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳುವುದಕ್ಕೂ ಕ್ರಿಯಾಶೀಲ ಸಾಕ್ಷರತೆ ಮಾರ್ಗದರ್ಶಿಯಾಗುತ್ತದೆ.



## ಮಹಿಳೆಯರ ಸಾಕ್ಷರತೆ

ಪುರುಷರಿಗಿಂತ ಹೆಚ್ಚಿಗೆ ಮಹಿಳೆಯರಲ್ಲಿ ಅನಕ್ಷರತಾ ಸಮಸ್ಯೆಗಳು ತೀವ್ರವಾಗಿರುತ್ತವೆ. ಭಾರತದಲ್ಲಿ ಪುರುಷರ ಎರಡುಪಟ್ಟು ಮೀರಿ ಹೆಚ್ಚು ಅನಕ್ಷರಸ್ಥ ಮಹಿಳೆಯರಿದ್ದಾರೆ. ಭಾರತದ ಎಲ್ಲ ರಾಜ್ಯಗಳಲ್ಲಿ, ಅದು ಕೇರಳವಾಗಲಿ ಅಥವಾ ಪಂಜಾಬ್ ಆಗಲಿ ಅನಕ್ಷರಸ್ಥ ಮಹಿಳೆಯರ ಪ್ರಮಾಣ ಇದೇ ರೀತಿಯಿದೆ. ಹುಡುಗಿಯಾಗಿದ್ದಾಗ ಮನೆಯಲ್ಲಿರುವ ಚಿಕ್ಕ ಮಕ್ಕಳ ಆರೈಕೆ ಅಥವಾ ತಾಯಿಗೆ ಸಹಾಯ ಅಥವಾ ಕೆಲಸಕ್ಕೆ ಹೋಗಬೇಕು. ದೊಡ್ಡವಳಾದಾಗ ಮನೆಯೊಳಗಿನ ಕೆಲಸದ ಜೊತೆಗೆ ಮನೆಯ ಹೊರಗೆ ಸಂಬಳಕ್ಕಾಗಿ ಒಂದೇ ಸಮನೆ ದುಡಿಯಬೇಕು. ಹೀಗೆ ಸತತವಾಗಿ ದುಡಿಯುವ ಮಹಿಳೆಗೆ ಓದು-ಬರಹ ಕಲಿಯಲು ಅವಕಾಶ ಸಿಗುವುದು ತುಂಬ ಅಪರೂಪ. ಆಕಸ್ಮಾತ್ ಸಮಯ, ಅವಕಾಶ ದೊರೆತರೂ ಸಹ ಇಂದಿನ ಸಮಾಜ ಮಹಿಳೆಯರಿಗೆ ಕಡಿಮೆ ಸ್ಥಾನ ನೀಡುತ್ತಿರುವುದರಿಂದ ಮತ್ತು ಅವರು ಕಲಿಯುವುದು ಅಷ್ಟೇನು ಮುಖ್ಯವಲ್ಲವೆಂದು ಪರಿಗಣಿಸುವುದರಿಂದ, ಮಹಿಳೆಯರು ಅನಕ್ಷರಸ್ಥರಾಗಿಯೇ



ಉಳಿಯುತ್ತಿದ್ದಾರೆ. ಮನೆಯ ನಾಲ್ಕು ಅಗೋಡೆಗಳ ಮಧ್ಯೆ ಬಂಧಿಸಲ್ಪಟ್ಟಿರುವ ಹಾಗೂ ಪ್ರತಿನಿತ್ಯ ಬೆನ್ನು ಮುರಿಯುವಷ್ಟು ದುಡಿಯುವ ಮಹಿಳೆಗೆ ಹೊರ ಜಗತ್ತನ್ನು ಅರಿಯಲು ಮತ್ತು ವಿಮೋಚನೆ ಮಾರ್ಗಗಳನ್ನು ಅರಸಲು, ಸಾಕ್ಷರತೆಯೇ ಹೆಬ್ಬಾಗಿಲು ಆಗಬಹುದು. ನಾವಿಂದು ತಿಳಿದಿರುವಂತೆ ಮಹಿಳೆಯು ಸಂಸಾರಕ್ಕೆ ಭಾರವಾಗುವುದರ ಬದಲು ಸ್ವಾವಲಂಬನೆಯ ಅಕ್ಷರಸ್ಥ ಮಹಿಳೆಯು ಸಂಸಾರದ ಚೈತನ್ಯ ಚಿಲುಮೆಯಾಗಬಲ್ಲಳು. ಮಹಿಳೆಯರನ್ನು ಅಕ್ಷರಸ್ಥರನ್ನಾಗಿಸುವುದರಿಂದ ನಮ್ಮ ದೇಶದ ಬೃಹತ್ ಸೃಜನಾತ್ಮಕ ಚೈತನ್ಯವೊಂದನ್ನು ಮುಖ್ಯವಾಹಿನಿಗೆ ತಂದು ಸೇರಿಸಿದಂತಾಗುತ್ತದೆ. ಅದರಿಂದ ನಾವು ಪ್ರಗತಿ ಪಥದಲ್ಲಿ ದಾಪುಗಾಲು ಹಾಕಿ ಸಾಗಲು ಸಹಾಯವಾಗುತ್ತವೆ.

## ಕಲಿಕೆಗಾಗಿ ಹೋರಾಟ

ಅನಕ್ಷರಸ್ಥ ವಯಸ್ಕರು ಒಂದು ವೇಳೆ ಓದು-ಬರಹ ಕಲಿಯಬೇಕೆಂದು ಇಷ್ಟಪಟ್ಟರೂ ಸಹ, ಅವರಿಗೆ ದೊರಕುವ ಅವಕಾಶಗಳು ಕಡಿಮೆಯಿರುವುದು ದುರದೃಷ್ಟದ ಸಂಗತಿ. ಇಂದಿರುವ ವಯಸ್ಕರ ಶಿಕ್ಷಣ ಕೇಂದ್ರಗಳ ಸಂಖ್ಯೆ ತುಂಬಾ ಕಡಿಮೆ. ಇರುವವು ಸಹ ಸರಿಯಾಗಿ ನಡೆಯುವುದು ಅಪರೂಪ. ಆ ಶಿಕ್ಷಣ ಕೇಂದ್ರಗಳು ಕಲಿಸುವ ವೇಳೆ ಸರಿಯಾಗಿರುವುದಿಲ್ಲ; ಲಾಟೀನಿಗೆ ಸೀಮೆಎಣ್ಣೆ ಇರುವುದಿಲ್ಲ; ಕಲಿಸುವ ಪುಸ್ತಕಗಳಿರುವುದಿಲ್ಲ ಅಥವಾ ಇದೇ ರೀತಿಯ ಹಲವಾರು ತೊಡಕುಗಳಿರುತ್ತವೆ. ನಾವು ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಳ್ಳಬೇಕೆಂಬುದೇ ಇಂದಿನ ಮುಖ್ಯ ಪ್ರಶ್ನೆ.

ವಯಸ್ಕರ ಶಿಕ್ಷಣಕ್ಕೆ ಸರಿಯಾದ ಪ್ರೋತ್ಸಾಹ ನೀಡಿಲ್ಲವೆಂಬುದು ಬಹುಮಟ್ಟಿಗೆ ನಿಜವಾದರೂ ಸಹ, ನಾವು ಸರಕಾರ ಮತ್ತು ಸಂಬಂಧಪಟ್ಟವರನ್ನು ಅವಹೇಳನಮಾಡಿದರೆ, ಖಂಡಿಸಿದರೆ ಸಾಕೆ? ಯಾರೋ ಒಬ್ಬರು ಬಂದು ನಮಗೆ ಅಕ್ಷರಗಳನ್ನು ಹೇಳಿಕೊಡುವವರಿಗೆ ನಾವು ಕಾಯುತ್ತಾ ಕುಳಿತುಕೊಳ್ಳಬೇಕೇ? ಅಥವಾ ಓದು-ಬರಹ ಕಲಿಯಲು ನಾವೇ ಸ್ವಂತ ವ್ಯವಸ್ಥೆ ಮಾಡಿಕೊಳ್ಳಬೇಕೇ? ಬೇರೆಯವರಿಗೆ ಕಾಯುವುದಾದರೆ, ಅನಂತಕಾಲ ಕಾಯುತ್ತಲೇ ಇರಬೇಕಾಗಬಹುದು. ನಾವು ಅನಕ್ಷರಸ್ಥ ದೇಶದವರಾಗಿರುವುದರಿಂದ ಕೆಲವರಿಗೆ ಲಾಭವಿದೆ. ದಿನನಿತ್ಯದ ಜೀವನ ಸಾಗಿಸುವುದಕ್ಕೆ ಸತತವಾಗಿ ದುಡಿಯಬೇಕಾಗಿರುವ ನಮಗೆ ಓದು-ಬರಹ ಕಲಿಯಲು ಸಮಯವಾಗಲಿ, ಶಕ್ತಿಯಾಗಲೀ ಇಲ್ಲವೆನಿಸಬಹುದು. ಆದರೂ ನಾವು ಸಾಕ್ಷರರಾಗುವುದು ಅತ್ಯಂತ ಅವಶ್ಯ. ಏಕೆಂದರೆ ನಾವು





12

ವಿದ್ಯಾವಂತರಾಗದೆ ಹೋದರೆ, ಸ್ವಾವಲಂಬಿಗಳಾಗದೆ ಹೋದರೆ, ನಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಸಾಧ್ಯವಿಲ್ಲ.

ನಮ್ಮ ಜೀವನ ಉತ್ತಮವಾಗುವುದನ್ನು ಕೇವಲ ಸಾಕ್ಷರತೆಯೇ ಖಾತ್ರಿಪಡಿಸುವುದಿಲ್ಲ. ಆದರೆ ಈ ದಿಶೆಯಲ್ಲಿ ಸಾಕ್ಷರತೆಯು ಮೊದಲ ಹೆಜ್ಜೆ ಹಾಗೂ ಅತ್ಯಂತ ಅಗತ್ಯವಾದ ಹೆಜ್ಜೆ. ಸಾಕ್ಷರತೆಯು ಅತ್ಯಂತ ಪ್ರಯಾಸಕರ ಹೆಜ್ಜೆಯೂ ಹೌದು. ನಾವು ಸಾಕ್ಷರರಾಗುವುದಕ್ಕೆ ವೈಯುಕ್ತಿಕ ಹಾಗೂ ಸಾಮೂಹಿಕ ಹೋರಾಟ ಮಾಡಬೇಕು. ನಮ್ಮ ಜೀವನವನ್ನು ಉತ್ತಮಪಡಿಸಲು ನಡೆಸಬೇಕಾದ ಬೃಹತ್ ಹೋರಾಟದಲ್ಲಿ, ಸಾಕ್ಷರತೆಗಾಗಿ ನಡೆಸಬೇಕಾದ ಹೋರಾಟ ಒಂದು ಪ್ರಮುಖ ಭಾಗ. ನಾವು ಇದುವರೆವಿಗೆ ಅನಕ್ಷರಸ್ಥರಾಗಗಿ ಉಳಿಯುವಂತೆ ಮಾಡಿರುವ ವ್ಯವಸ್ಥೆಯ ವಿರುದ್ಧ ನಡೆಸಬೇಕಾದ ಹೋರಾಟದಲ್ಲಿ, ಸಾಕ್ಷರತೆಗಾಗಿ ನಡೆಸುವ ಹೋರಾಟವೂ ಒಂದು ಭಾಗ. ಸಾಕ್ಷರತೆಗಾಗಿ ನಡೆಸುವ ಹೋರಾಟವು, ನಮ್ಮನ್ನು ಕಾಡುತ್ತಿರುವ ಹಸಿವು, ಕಾಯಿಲೆಗಳು, ಅಸಹಾಯಕತೆ ಮತ್ತು ಶೋಷಣೆಯ ವಿರುದ್ಧದ ಹೋರಾಟವು ಹೌದು. ಈ ಹೋರಾಟವು ಉತ್ತಮವಾದ ನಾಳೆಗಳಿಗಾಗಿ ನಡೆಯಬೇಕಾದ ಹೋರಾಟ. ಬ್ರಿಟಿಷರಿಂದ ಸ್ವಾತಂತ್ರ್ಯಗಳಿಸಲು ನಾವೆಲ್ಲ ಒಟ್ಟಾಗಿ ಹೋರಾಡಿದಂತೆ, ಇಂದು ಸಾರ್ವತ್ರಿಕ ಸಾಕ್ಷರತೆ ಪಡೆಯಲು ಒಗ್ಗಟ್ಟಿನಿಂದ ಹೋರಾಡಬೇಕಾಗಿದೆ. ಮೌಢ್ಯ, ನಿರುತ್ಸಾಹ ಅನಕ್ಷರತೆಯಿಂದ ವಿಮೋಚನೆ ಪಡೆಯಲು, ಹಸಿವು,ಕಾಯಿಲೆ ಹಾಗೂ ಬಡತನದಿಂದ ಬಿಡುಗಡೆ ಪಡೆಯಲು ಸಾಧ್ಯವಿರುವುದರಿಂದ, ನಾವೆಲ್ಲ ಸಾರ್ವತ್ರಿಕ ಸಾಕ್ಷರತೆಗಾಗಿ ಹೋರಾಟ ಮಾಡಲು ಒಂದಾಗೋಣ.

## ಮುಖ್ಯಾಂಶಗಳು

1. ನಮಗೆಲ್ಲ ಓದು-ಬರಹ ತಿಳಿದಿರುವುದು ಅಗತ್ಯ.
2. ಅನಕ್ಷರಸ್ಥರಾಗಿರುವುದರಿಂದ ಆಗುವ ಅನಾನುಕೂಲಗಳು. ಸಭಿಕರೊಡನೆ ಮಾತನಾಡಿ ಅವು ನೀಡುವ ನಿದರ್ಶನಗಳನ್ನು ವಿವರಿಸಿ. ಬಸ್ ಪ್ರಯಾಣ ಮಾಡುವಾಗ, ಅಂಗಡಿಗಳಿಂದ ವಸ್ತುಗಳನ್ನು ಕೊಳ್ಳುವಾಗ ಹಾಗೂ ಇತರ ಸಂದರ್ಭಗಳಲ್ಲಿ ಅನಕ್ಷರಸ್ಥರು ಮೋಸ ಹೋಗುವ ಉದಾಹರಣೆಗಳನ್ನು ನೀಡಿ.
3. ನಮ್ಮಲ್ಲಿ ಅನೇಕರಿಕೆ ಓದು-ಬರಹ ಕಲಿಯಲು ಇಷ್ಟವಿತ್ತು. ಆದರೆ ಅವಕಾಶ ಸಿಗಲಿಲ್ಲ.
4. ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಅನಕ್ಷರಸ್ಥರಿದ್ದಾರೆ. ಪ್ರಖ್ಯಾತ ಕವಿಗಳು, ಸಾಹಿತಿಗಳು ಇರುವ ನಮ್ಮ ದೇಶಕ್ಕೆ ಇದೊಂದು ಅವಮಾನದ ಸಂಗತಿ.



5. ಸುಮಾರು 4000 ವರ್ಷಗಳ ಹಿಂದೆ ಮನುಷ್ಯ ಬರಹವನ್ನು ಕಂಡು ಹಿಡಿದ.

6. ಪ್ರಾಚೀನ ಜೀವಿಗಳಿಂದ ಮನುಷ್ಯ ವಿಕಾಸವಾಗಿದ್ದಾನೆ.

7. ಬರಹ-ಜ್ಞಾನ ಹಾಗೂ ಅನುಭವದ ದಾಸ್ತಾನು, ಪುಸ್ತಕಗಳು ಜ್ಞಾನ ಸಂಪತ್ತಿನ ಉಗ್ರಾಣಗಳು.

8. ನಮ್ಮ ದೇಶದಲ್ಲಿ ಹೆಚ್ಚು ಅನಕ್ಷರಸ್ಥರಿರುವುದಕ್ಕೆ ಕಾರಣಗಳೇನು? ಬಡತನ, ಅವಕಾಶಗಳ ಕೊರತೆ, ಜಮೀನುದಾರರಿಂದ ವಿರೋಧ, ಮಧ್ಯದಲ್ಲಿ ಶಾಲೆ ಬಿಡುವುದು.

9. ಅನಕ್ಷರಸ್ಥರು ಅಜ್ಞಾನಿಗಳೇನಲ್ಲ. ಶಾಲಾ ಶಿಕ್ಷಣದಲ್ಲಿ ದೊರಕಲು ಸಾಧ್ಯವಿರದ ಅನೇಕ ವಿಷಯ ಅವರಿಗೆ ಅನುಭವದಿಂದ ತಿಳಿದಿರುತ್ತದೆ. ಆದಾಗ್ಯೂ ಅನಕ್ಷರಸ್ಥರ ಜ್ಞಾನ ಸೀಮಿತವಾದುದು.

10. ಪ್ರಜಾಸತ್ತಾತ್ಮಕ ಪಾಲ್ಗೊಳ್ಳುವಿಕೆಗೆ ಅಗತ್ಯವಾದ ಜ್ಞಾನವನ್ನು ಸಾಕ್ಷರತೆ ನೀಡಬಲ್ಲದು.

11. ಪ್ರಗತಿಯ ಕಾರ್ಯಕ್ರಮಗಳು ಅವುಗಳ ಫಲ ಅನುಭವಿಸಬೇಕಾದವರಿಗೆ ಸರಿಯಾಗಿ ಅರ್ಥವಾಗದಿದ್ದಲ್ಲಿ, ಪ್ರಗತಿ ಕಾರ್ಯಕ್ರಮಗಳು ತದ್ವಿರುದ್ಧ ಪರಿಣಾಮ ಉಂಟುಮಾಡಬಹುದು.

12. ಸಾಕ್ಷರತೆಯು, ಕೇವಲ ಓದು-ಬರಹ ಕಲಿಯುವುದಕ್ಕಿಂತ ಹೆಚ್ಚಿನದಾಗಿರಬೇಕು.

13. ಎಲ್ಲರಿಗಿಂತ ಮಹಿಳೆಯರು ಹೆಚ್ಚು ದುರದೃಷ್ಟಶಾಲಿಗಳು, ಅವರಲ್ಲಿ ಅನಕ್ಷರಸ್ಥರು ಹೆಚ್ಚು. ಅವರನ್ನು ಅಕ್ಷರಸ್ಥರನ್ನಾಗಿ ಮಾಡುವುದು ಬಹಳ ಮುಖ್ಯ.

14. ನಾವು ಅಕ್ಷರಸ್ಥರಾಗಲು ಬಹಳ ದಿನಗಳ ಕಾಲ ಕಾಯುವುದಕ್ಕೆ ಆಗುವುದಿಲ್ಲ. ನಾವು ಕಲಿಯುತ್ತೇವೆಂದು ದೃಢ ತೀರ್ಮಾನ ಕೈಗೊಳ್ಳಲೇಬೇಕಾಗಿದೆ.

15. ಸಾಕ್ಷರತೆಯು ನಮ್ಮನ್ನು ಪರಾವಲಂಬನೆಯಿಂದ ವಿಮೋಚನೆಗೊಳಿಸುತ್ತದೆ. ಸಾಕ್ಷರತೆಯಿಂದ ನಾವು ಬಲಿಷ್ಠರಾಗುತ್ತೇವೆ.

- ಹೆಚ್.ಎಸ್.ನಿರಂಜನಾರಾಧ್ಯ.
- ಸಿ.ಯತಿರಾಜು





14

# ಸಾಕ್ಷರತೆ ಮತ್ತು ಮಹಿಳೆಯರು

## ಮಹಿಳೆಯರಲ್ಲಿ ಅನಕ್ಷರತೆ

ಬಹಳಷ್ಟು ಭಾರತೀಯ ಮಹಿಳೆಯರು ಅನಕ್ಷರಸ್ಥರು. ಪ್ರತಿ ನೂರು ಮಹಿಳೆಯರ ಪೈಕಿ ಕೇವಲ ಇಪ್ಪತ್ತೈದು ಮಂದಿಗೆ ಮಾತ್ರ ಓದು-ಬರಹ ಗೊತ್ತು ಎಂದು ಅಂದಾಜು ಮಾಡಲಾಗಿದೆ. ಆದರೆ ಗಂಡಸರಲ್ಲಿ ಪ್ರತಿ ನೂರು ಮಂದಿಗೆ 47 ಜನ ಅಕ್ಷರಸ್ಥರು. ಹಳ್ಳಿಗಳಲ್ಲಿ ಪ್ರತಿ ನೂರು ಮಹಿಳೆಯರ ಪೈಕಿ ಕೇವಲ ಹದಿನೆಂಟು ಮಂದಿ ಮಾತ್ರ ಓದು ಬರಹ ತಿಳಿದವರು. ಕಲಿತ ಮಹಿಳೆಯರ ಪೈಕಿ ಬಹುತೇಕ ಮಂದಿ ನಗರಗಳಲ್ಲಿ ಇರುವವರು. ದೇಶದ ಅರ್ಧದಷ್ಟು ಜಿಲ್ಲೆಗಳಲ್ಲಿ ಪ್ರತಿ ನೂರು ಮಹಿಳೆಯರ ಪೈಕಿ 12 ಮಹಿಳೆಯರು ಮಾತ್ರ ಓದು-ಬರಹ ಬಲ್ಲರು. ಪರಿಶಿಷ್ಟ ಜಾತಿಯ ಮಹಿಳೆಯರಲ್ಲಿ ಪ್ರತಿ ನೂರಕ್ಕೆ ಐದು ಮಂದಿಗೆ ಮಾತ್ರ ಓದುಬರಹ ಗೊತ್ತು.

## ಮಹಿಳೆಯರು ಏಕೆ ಹೆಚ್ಚು ಅನಕ್ಷರಸ್ಥರು?

ಇದಕ್ಕೆ ಬಡತನ ಹಾಗೂ ಅದರ ಪರಿಣಾಮವಾಗಿರುವ ದುಸ್ತರ ಜೀವನ ಸ್ಥಿತಿಯೇ ಮುಖ್ಯ ಕಾರಣ. ಅನೇಕ ಕಡೆ ಶಾಲೆಗಳೇ ಇಲ್ಲ; ಇದ್ದರೂ ದೂರ; ಸರಿಯಾಗಿ ಶಾಲೆಗಳು ಕೆಲಸ ಮಾಡುವುದೂ ಇಲ್ಲ. ಬಹಳಷ್ಟು ಸಂಖ್ಯೆಯ ಅಕ್ಷರಸ್ಥರಿರುವ (ಪ್ರತಿ ನೂರಕ್ಕೆ ಎಪ್ಪತ್ತು ಮಂದಿ) ಕೇರಳದಲ್ಲೂ ಮಹಿಳೆಯರ ಸಾಕ್ಷರತೆ ಪುರುಷರಿಗಿಂತ ಶೇಕಡಾ 10 ರಷ್ಟು ಕಡಿಮೆ. ಹೀಗೇಕೆ?

## ಮಹಿಳೆಯರು ಮತ್ತು ದುಡಿಮೆ

ಬಡತನದ ಪರಿಣಾಮವಾಗಿ ಬದುಕಿನ ತಾಪತ್ರಯದ ಹೊರೆ ಗಂಡಿಗಿಂತಲೂ ಹೆಣ್ಣಿನ ಮೇಲೆ ಹೆಚ್ಚು ಎನ್ನುವುದು ಸ್ಪಷ್ಟ ಕಾರಣ. ಬಹಳ ಮಂದಿ ಭಾರತೀಯ ಮಹಿಳೆಯರು ದುಡಿಮೆಗಾರರು. ಅವರು ಹೊಲ ಗದ್ದೆಗಳಲ್ಲಿ ಕೂಲಿ ಮಾಡುವವರು. ಬಿತ್ತನೆ, ಕಳೆ ಕೀಳುವುದು, ನೀರು ಹಾಯಿಸುವುದು. ಕಸಿ ಮಾಡುವುದು, ಪೈರು ನೆಡುವುದು, ಕಟಾವು, ತೂರುವುದು, ಬಡಿಯುವುದು, ಗೊಬ್ಬರ ಸೇರಿಸುವುದು, ಎಲ್ಲದರಲ್ಲೂ ದುಡಿಯುವರು. ಉಳುಮೆಯೊಂದರಲ್ಲಿ ಮಾತ್ರ ಅವರು ಭಾಗವಹಿಸುವುದು ಕಡಿಮೆ. ಗುತ್ತಿಗೆ ಕೆಲಸಗಾರರಾಗಿ, ಬಂಡೆ ಸೀಳಲು, ರಸ್ತೆ ಮಾಡಲು ದುಡಿಯುವವರು, ತೋಟಗಾರಿಕೆಯಲ್ಲಿ,



ಬೀಡಿ ಸುತ್ತುವುದರಲ್ಲಿ, ಬೆಂಕಿಕಡ್ಡಿ ತಯಾರಿಕೆಯಲ್ಲಿ, ನೇಯ್ಗೆಯಲ್ಲಿ ಮತ್ತು ಇನ್ನೂ ಅನೇಕ ವೈವಿಧ್ಯಮಯ ಕಸುಬುಗಳಲ್ಲಿ ಅವರ ಪಾಲಿದೆ. ಅವರು ಗಂಡಸರಿಗಿಂತ ಕೆಲವೊಮ್ಮೆ ಹೆಚ್ಚು ದುಡಿದರೂ ಅವರಿಗೆ ದೊರೆಯುವ ಕೂಲಿ ಕಡಿಮೆ. ಅವರನ್ನು ಕೀಳು ಕೆಲಸಗಳತ್ತ ದೂಡಲಾಗುತ್ತದಲ್ಲದೆ ಸಾಮಾಜಿಕ ಭದ್ರತೆಯಿಂದ ಅವರನ್ನು ವಂಚಿಸಿ ಶೋಷಿಸಲಾಗುತ್ತಿದೆ.

ದಿನದ ಕಠಿಣ ಪರಿಶ್ರಮದ ನಂತರ ಮನೆಗೆ ಹಿಂದಿರುಗಿದ ಅವರಿಗೆ ಗೃಹಕೃತ್ಯದ ಹೊರೆ ಕಾದಿರುತ್ತದೆ. ಆಹಾರ ತಯಾರಿ, ಬಟ್ಟೆ ಒಗೆಯುವುದು, ಮಕ್ಕಳ ಪಾಲನೆ, ಸೌದೆಯ ಸಂಗ್ರಹ, ಮನೆಯ ಶುಚಿ ಎಲ್ಲವೂ ಮಹಿಳೆಯ ಹೊಣೆ. ಗಂಡು ಅದಕ್ಕೆ ಕಿಂಚಿತ್ ನೆರವಾಗಬಹುದು; ನೆರವಾಗದಿರಲೂ ಸಾಕು, ಒಳಗಿನ, ಹೊರಗಿನ ದುಡಿಮೆಯಲ್ಲಿ ನುಗ್ಗಿ ನಲುಗಿರುವ ಮಹಿಳೆಗೆ ಓದಲು, ಬರೆಯಲು ಅವಕಾಶವೂ ಇಲ್ಲ; ಪ್ರೋತ್ಸಾಹ ಮೊದಲೇ ಇಲ್ಲ.

## ಮಹಿಳೆಯರ ಆರೋಗ್ಯ



ಇದಿಷ್ಟೇ ಸಾಲದೆಂಬಂತೆ ಮಹಿಳೆಯರ ಆರೋಗ್ಯವೂ ಒಂದು ಗಂಭೀರ ಸಮಸ್ಯೆ. ನಿಸರ್ಗಸಹಜವಾಗಿ ಮಹಿಳೆಯರು ಪುರುಷರಿಗಿಂತ ಬಹಳಕಾಲ ಬಾಳುವರು. ಅನಾರೋಗ್ಯದ ಅಪಾಯ ಪುರುಷರಿಗೆ ಹೆಚ್ಚು. ಹೀಗಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಎಲ್ಲ ವಯೋಮಾನಗಳಲ್ಲಿಯೂ ಪುರುಷರ ಸಂಖ್ಯೆಗಿಂತ ಸ್ತ್ರೀಯರ ಸಂಖ್ಯೆಯೇ ಜಾಸ್ತಿ. ಆದರೆ ಭಾರತದಲ್ಲಿ ಇದಕ್ಕೆ ತದ್ವಿರುದ್ಧ. ಪ್ರತಿ ಸಾವಿರ ಪುರುಷರಿಗೆ ಕೇವಲ 939 ಮಹಿಳೆಯರಿದ್ದು ಅವರ ಸಂಖ್ಯೆ ಮತ್ತಷ್ಟು ಕ್ಷೀಣಿಸುತ್ತಿದೆ. ಇದಕ್ಕೆ ಕಾರಣ ನಮ್ಮ ಸಮಾಜ ಮಹಿಳೆಗೆ ತೋರಿಸುತ್ತಿರುವ ಪಕ್ಷಪಾತಧೋರಣೆ.

ಉದಾಹರಣೆಗೆ, ಆಹಾರ ವಿಷಯವನ್ನು ತೆಗೆದುಕೊಳ್ಳೋಣ. ಯಾವುದೇ ಕುಟುಂಬದಲ್ಲಿ ಹೆಣ್ಣುಮಕ್ಕಳು ಮತ್ತು ಯುವತಿಯರು ಸೇವಿಸುವ ಆಹಾರ ಪ್ರಮಾಣ ಪುರುಷರು ಸೇವಿಸುವುದಕ್ಕಿಂತ ಕಡಿಮೆ. ಹೀಗಾಗಿ ಪೋಷಕಾಂಶದ ನ್ಯೂನತೆ ಮಹಿಳೆಯರಲ್ಲೇ ವಿಶೇಷವಾಗಿ ಜಾಸ್ತಿ. ಗಂಡಸರೇ ಮೊದಲು ಆಹಾರ ಸೇವಿಸುವರು; ಹೆಂಗಸರಿಗೆ ಉಳಿದದ್ದು ಮಾತ್ರ. ಉಪವಾಸ ಮಾಡಬೇಕಾಗಿ ಬಂದರೆ ಹಾಗೆ ಉಪವಾಸ ಮಾಡುವವರು ಹೆಂಗಸರೇ. ಪ್ರತಿ ನೂರು ಗಂಡು ಮಕ್ಕಳ ಪೈಕಿ ಇಬ್ಬರಿಗೆ ಪೋಷಕಾಂಶದ ಕೊರತೆ ಇದ್ದರೆ, ಪ್ರತಿ ನೂರು ಹೆಣ್ಣು ಮಕ್ಕಳ ಪೈಕಿ 18 ಮಂದಿಗೆ ಪೋಷಕಾಂಶದ ತೀವ್ರ ಕೊರತೆ ಮತ್ತು 61 ಮಂದಿಗೆ ಸಾಧಾರಣ ಕೊರತೆ ಇರುವುದಾಗಿ ಕಂಡುಬಂದಿದೆ.




ಕೇವಲ ಹೆಣ್ಣು ಮಕ್ಕಳಷ್ಟೇ ಅಲ್ಲ, ಪೋಷಕಾಂಶದ ಕೊರತೆಯಿಂದ ಬಳಲುವವರಲ್ಲಿ ಸಾಕಷ್ಟು ಮಂದಿ ದುಡಿಯುವ ಮಹಿಳೆಯರು, ಗರ್ಭಿಣಿಯರು, ಎದೆಹಾಲು ಕುಡಿಸುವ ತಾಯಿಯರೂ ಇದ್ದಾರೆ. ಇದೇ ಅವರ ಅನಾರೋಗ್ಯಕ್ಕೆ ಪ್ರಮುಖ ಕಾರಣ. ದುಡಿಮೆಯ ಹೊರೆ ಮತ್ತು ಪೋಷಕಾಂಶಗಳ ಕೊರತೆ ಎರಡೂ ಸೇರಿ ಹೆಣ್ಣು ಜೀವಕ್ಕೇ ಗಂಡಾಂತರವನ್ನೊಡ್ಡುತ್ತವೆ. ಗರ್ಭಿಣಿಯಾದ ಮಹಿಳೆಯಲ್ಲಿ ರೋಗ ನಿರೋಧಕ ಶಕ್ತಿ ತಗ್ಗುವುದರಿಂದ ಕ್ಷಯ, ಕಾಮಾಲೆ, ಮಲೇರಿಯಾಗಳಂತಹ ಮಾರಕ ರೋಗಗಳಿಗೆ ಆಕೆ .ಬಲಿಯಾಗುವ ಸಾಧ್ಯತೆ ಇದೆ. ಹೀಗಾಗಿ ಅವಳು ಗರ್ಭಿಣಿಯಾದಳೆಂದರೆ ಆರೋಗ್ಯವಾಗಿ ಬದುಕುಳಿಯುವುದೇ ಕಷ್ಟ.

ಇಷ್ಟೇ ಅಲ್ಲದೆ ಮಹಿಳೆಗೆ ಆರೋಗ್ಯ ಪಾಲನೆಯ ಸೌಕರ್ಯವೂ ಅವಳಿಂದ ದೂರವೇ. ಗ್ರಾಮೀಣ ಪ್ರದೇಶದಲ್ಲಿ ಅವಳಿಗೆ ಆರೋಗ್ಯ ಸೌಕರ್ಯಗಳೂ ದೊರೆಯುವುದಿಲ್ಲ. ಕೆಲವೊಮ್ಮೆ ಆರೋಗ್ಯ ರಕ್ಷಣೆಗೆ ತಗಲುವ ವೆಚ್ಚವೂ ಅವಳಿಗೆ ನಿಲುಕುವಂತಹದಲ್ಲ. ಇರುವ ಸೌಕರ್ಯವನ್ನು ಬಳಸಿಕೊಳ್ಳಲು ಬೇಕಾದ ಬಿಡುವೂ ಕೂಡ ಆಕೆಗೆ ದೊರೆಯುವುದಿಲ್ಲ.

ಮಹಿಳೆಯರ ಆರೋಗ್ಯ ಮತ್ತಷ್ಟು ಹದಗೆಡಲು ಆಕೆ ಪದೇ ಪದೇ ಗರ್ಭಿಣಿಯಾಗುವುದೂ ಕಾರಣ. ಮಕ್ಕಳನ್ನು ಹೆರುವ ವೇದನೆ ಮತ್ತು ಇತರ ತೊಂದರೆಗಳು ಎಲ್ಲ ಮಹಿಳೆಯರಿಗೂ ತಿಳಿದಿದೆ. ಬಡ ಕುಟುಂಬದ ಮಹಿಳೆಯರು ಹಗಲು ರಾತ್ರಿ ದುಡಿಯಬೇಕು. ಇವರಿಗೆ ಬೆಂಬಲವಾಗಿರುವವರು ಮಕ್ಕಳು ತಾನೇ. ಆದ್ದರಿಂದ ಅವರು ಹೆಚ್ಚು ಮಕ್ಕಳನ್ನು ಹೆರಬೇಕಾಗಬಹುದು.

ಬಾಲ್ಯದಲ್ಲಿ ಮಕ್ಕಳು ಸಾಯುವುದು ತಪ್ಪಬೇಕಾದರೆ ಅವರ ಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಬೇಕು. ಹೀಗಾಗಲು ಕಡಿಮೆ ಮಕ್ಕಳಿದ್ದರೆ ಸಾಧ್ಯ. ಸದ್ಯದ ಪರಿಸ್ಥಿತಿಯಲ್ಲಿ ಭಾರತದ ಮಹಿಳೆಗೆ ಇದಂತೂ ಕನಸಿನ ಗಂಟು.



## ಸಮಾಜದಲ್ಲಿ ಮಹಿಳೆಗೆ ಹೀನಾಯವಾದ ಸ್ಥಾನಮಾನ

ಮಹಿಳೆಯನ್ನು ಕೀಳೆಂದೂ, ಕೆಲಸಕ್ಕೆ ಬಾರದವಳೆಂದೂ, ಹೊರೆಯೆಂದೂ ಭಾವಿಸುವುದು ಅವಳಿಗೆ ಮತ್ತೊಂದು ಸಂಕೋಲೆಯಾಗಿ ಪರಿಣಮಿಸಿದೆ. ಎಲ್ಲ ಮಹಿಳೆಯರ ವಿಷಯದಲ್ಲೂ ಹೀಗಲ್ಲದಿದ್ದರೂ ಬಹಳಷ್ಟು ಸಂದರ್ಭದಲ್ಲಿ ಹೀಗೆಯೇ ಕಾಣಲಾಗುತ್ತದೆ. ಕೆಲವು ಆದಿವಾಸಿಗಳಲ್ಲಿ ಮಹಿಳೆಗೆ ಸಮಾನ

ಸ್ಥಾನವಿದೆ. ಕಡಿಮೆ ಆದಾಯದ ಸಮಾಜಗಳಲ್ಲಿ ದುಡಿಯುವ ಮಹಿಳೆ ಸ್ವಲ್ಪಮಟ್ಟಿನ ಸ್ವಾತಂತ್ರ್ಯಗಳಿಸಿದ್ದಾಳೆ. ಆದರೆ ಇಂತಹವರ ಸಂಖ್ಯೆ ಕಡಿಮೆ. ಬಹಳ ಹಿಂದಿನ ಕಾಲದಲ್ಲಿ ಮಹಿಳೆಗೂ ಸಮಾನಸ್ಥಾನವಿತ್ತು. ಆಕೆಗೂ ದುಡಿಮೆಯಲ್ಲಿ ಸಮಾನಪಾಲಿತ್ತು. ಮಹಿಳೆಯರ ಮಾತಿಗೆ ಬೆಲೆಯಿತ್ತು ಗೌರವವೂ ಇತ್ತು. ಮಹಿಳೆಯರೂ ತಮ್ಮ ಗುಂಪಿನ ನಾಯಕನ ಆಯ್ಕೆಯಲ್ಲಿ ಭಾಗವಹಿಸುತ್ತಿದ್ದರು. ಆದರೆ ದುಡಿಮೆಯ ಸ್ವರೂಪದಲ್ಲಿ ಮಾತ್ರ ಹಂಚಿಕೆ ಇತ್ತು. ಗಂಡು ಆಹಾರವನ್ನು ಸಂಗ್ರಹಿಸಲು, ಬೇಟೆಯಾಡಲು ತೊಡಗಿದರೆ ಮಹಿಳೆಯರು ಮನೆಯ ಬಳಿ ಮಕ್ಕಳಪಾಲನೆ, ವ್ಯವಸಾಯಗಳತ್ತ ಗಮನಹರಿಸುತ್ತಿದ್ದರು.

ಮಹಿಳೆಯರನ್ನು ಕೀಳಾಗಿ, ಕೇವಲ ಖಾಸಗಿ ಸ್ವತ್ತಾಗಿ ಪರಿಗಣಿಸತೊಡಗಿದ್ದು ಹೇಗೆ ಹುಟ್ಟಿತೆಂಬುದರ ವಿವರಗಳು ಸಾಕಷ್ಟು ತಿಳಿದಿಲ್ಲ. ಆದರೆ ಅದರ ಪರಿಣಾಮವಾಗಿ ಮಹಿಳೆಗೆ ಮನೆಯಲ್ಲಾಗಲೀ, ಹೊರಗಾಗಲೀ ಪುರುಷರ ದುಡಿಮೆಗೆ ಸಮಾನ ಸ್ಥಾನವನ್ನು ನೀಡದೇ ಇರುವಂತಾಯಿತು. ಅವಳನ್ನು ಕೇವಲ ಮಕ್ಕಳನ್ನು ಹೆರುವ, ದುಡಿಯುವ ದಾಸಿಯಾಗಿ, ಗಂಡನ್ನು ಆಕೆಯ ಒಡೆಯನನ್ನಾಗಿ ಭಾವಿಸುವ ಪರಿಸ್ಥಿತಿ ಉಂಟಾಯಿತು.

ಈಗಲೂ ಮಹಿಳೆಯನ್ನು ಗಂಡಸಿನ ಅವಲಂಬನೆಗೆ ತೊಡಗಿಸಿ ಅವಳನ್ನು ಅವನ ಖಾಸಗಿ ಆಸ್ತಿ ಎನ್ನುವಂತೆ ನಡೆಸಿಕೊಳ್ಳಲಾಗುತ್ತಿದೆ. ಆದಿವಾಸಿಗಳು ಮಹಿಳೆಯ ದುಡಿಮೆಯನ್ನು ಗೌರವಿಸುತ್ತಾರೆ. ಆಕೆಗೆ ವಧುದಕ್ಷಿಣೆ ಕೊಡುವ ಸಂಪ್ರದಾಯವಿದೆ. ಆದರೆ ನಾಗರಿಕ ಸಮಾಜದಲ್ಲಿ ಅವಳನ್ನು ಕೇವಲ ಹೊರೆ ಎಂದು ಭಾವಿಸಿ ವರನ ಕಡೆಯವರು ವರದಕ್ಷಿಣೆ ಕೇಳುವ ಪರಿಸ್ಥಿತಿ ಜಾರಿಯಲ್ಲಿದೆ. ಹೆಣ್ಣು ದುಡಿದರೂ ಆಕೆಯ ದುಡಿಮೆಗೆ ಲಾಭ ಸಿಗದ ಕಾರಣ ಕಡೆಗಣಿಸಲಾಗುತ್ತಿದೆ. ಹೊರಗೆ ದುಡಿಯುವ ಮಹಿಳೆಗೂ. ಸಂಪ್ರದಾಯದ ಹೊರೆ ಮತ್ತು ಸಾಮಾಜಿಕ ಮನೋಭಾವದ ಸಂಕೋಲೆಯಿಂದ ಬಿಡುಗಡೆ ಇಲ್ಲ.

ಹೆಣ್ಣು ಮಗು ಹುಟ್ಟಿದಾರಭ್ಯ ಅನೇಕ ಆಚರಣೆಗಳ ಹೆಸರಿನಲ್ಲಿ ತಂದೆಯಾದವನು ಹಣ ವೆಚ್ಚ ಮಾಡಬೇಕು. ಪ್ರಾಯ, ಮದುವೆ, ಮೊದಲಬಾರಿಗೆ ಸೀಮಂತ, ಮಗುವಿಗೆ ನಾಮಕರಣ ಇತ್ಯಾದಿ. ಇದರಿಂದಾಗಿ ಹೆಣ್ಣು ಮಗುವೆಂದರೆ ಹೊರೆಯೆಂಬ ನಂಬಿಕೆಗೆ ಬೆಂಬಲ ದೊರೆಯುತ್ತಿದೆ.



ತಂದೆತಾಯಿಯರು ವರದಕ್ಷಿಣೆ ಕೊಡಲಾರರೆಂಬ ಕಾರಣಕ್ಕಾಗಿಯೇ ಅನೇಕ ಹೆಣ್ಣುಮಕ್ಕಳಿಗೆ ಮದುವೆಯೇ ಆಗಿಲ್ಲ. ಸಾವಿರಾರು ಮಹಿಳೆಯರು ಬಲಾತ್ಕಾರ ಮತ್ತು ಬಡತನಗಳಿಗೆ ಬಲಿಯಾಗಿ ತನ್ನ ದೇಹವನ್ನೇ ಮಾರಿಕೊಂಡು ಬೆಲೆವೆಣ್ಣಾಗಬೇಕಾಗಿ ಬಂದಿದೆ. ಗಂಡಸರು ಅವರ ಅಸಹಾಯಕತೆಯನ್ನು ಗುರುತಿಸಿ ಸಹಾನುಭೂತಿ ತೋರಿಸುವ ಬದಲಿಗೆ, ಮಹಿಳೆಯರನ್ನು ಹೀನಾಯವಾಗಿ ಕಾಣುವ ಪರಿಸ್ಥಿತಿ ಇಂದು ಸಮಾಜದಲ್ಲಿದೆ.


ಸಾಮಾಜಿಕವಾಗಿ ಮಹಿಳೆಗೆ ತೋರಿಸಲಾಗುತ್ತಿರುವ ಪಕ್ಷಪಾತ ಸರ್ವವ್ಯಾಪಿ. ಅನೇಕ ಮಹಿಳೆಯರು ವೈದ್ಯರು, ನ್ಯಾಯಾಧೀಶರು, ವಕೀಲರು ಆಗಿ ದುಡಿಯುತ್ತಿದ್ದಾರೆ. ಮಹಿಳೆಗೆ ಆಗುತ್ತಿರುವ ಪಕ್ಷಪಾತವನ್ನು ವರದಕ್ಷಿಣೆಯ ಪಿಡುಗನ್ನು ಅವರು ಎದುರಿಸುತ್ತಿದ್ದಾರೆ. ಆದರೆ ಒಬ್ಬ ಮಹಿಳಾ ಪ್ರಧಾನಿಯೇ ಅಲ್ಲದೆ ಅನೇಕ ಕ್ಷೇತ್ರಗಳಲ್ಲಿ ಮಹಿಳೆಯರೇ ಇದ್ದಾಗ್ಯೂ ಮಹಿಳೆಯ ಬಗ್ಗೆ ಸಮಾಜದ ದೃಷ್ಟಿಕೋನ ಬದಲಾಗಿಲ್ಲ.



## ಬಿಡುಗಡೆಗಾಗಿ ಸಾಕ್ಷರತೆ

ನಮ್ಮ ದೇಶದಲ್ಲಿ ಪ್ರತಿ ಸಾವಿರ ಮಹಿಳೆಯರಲ್ಲಿ 4 ಮಂದಿ ಪದವೀಧರರು (ಪುರುಷರಲ್ಲಿ 1000ಕ್ಕೆ 13 ಮಂದಿ ಪದವೀಧರರು). ಪ್ರತಿ ನೂರಕ್ಕೆ ಇಬ್ಬರು ಮಹಿಳೆಯರಿಗೆ ಮಾತ್ರ ಉತ್ತಮ ಶಾಲಾ ಸೌಲಭ್ಯವಿದೆ; ಶೇಕಡಾ 25 ಮಂದಿಗೆ ಮಾತ್ರ ಓದು-ಬರಹ ಗೊತ್ತು. ಉಳಿದವರೆಲ್ಲಾ ತಮ್ಮ ಹಣೆಬರಹವೆಂದು ಮೂಕವಾಗಿ ಅನುಭವಿಸುವವರೇ ಮಹಿಳೆಯರು ಎಚ್ಚೆತ್ತು ಪ್ರತಿಭಟಿಸುವವರೆಗೆ ಸಮಾಜದ ಮನೋಭಾವ ಬದಲಾಗದು. ಲಕ್ಷಾಂತರ ಮಹಿಳೆಯರು ಅಕ್ಷರಸ್ಥರಾಗಿ ರಾಷ್ಟ್ರೀಯ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸುವವರೆಗೆ ಅವರ ಆಕ್ರಂದನ ಯಾರಿಗೂ ಕೇಳಿಸದು.

ಸಾಕ್ಷರತೆಯು ಅಗತ್ಯವಾದ ಮೊದಲ ಹೆಜ್ಜೆ. ಇದಿಲ್ಲದೇ ಸ್ವಾತಂತ್ರ್ಯ ಗಳಿಕೆ ಸಾಧ್ಯವಿಲ್ಲ. ಮಹಿಳೆಯರನ್ನು ಬಂಧಿಸಿರುವ ಅಂಶಗಳೇ ಪುರುಷರನ್ನೂ ಬಂಧಿಸಿವೆ. ಅಷ್ಟೇ ಅಲ್ಲ, ಮಹಿಳೆಯರ ಮೇಲಿನ ದಬ್ಬಾಳಿಕೆ ಕೊನೆಗೆ ಗಂಡಿಗೆ ತಿರುಗುಬಾಣವಾಗುವುದು. ಬಂಧುಗಳಾಗಬೇಕಾದವರು ಗುಲಾಮರಾಗಿದ್ದಾರೆ. ಬಿಡುಗಡೆಯಾದ ಮಹಿಳೆ ಮಾತ್ರ ಬಾಳಸಂಗಾತಿಯಾಗಬಲ್ಲಳು.



ಬಡತನ, ಹಸಿವು, ಅನಾರೋಗ್ಯ, ನಿರುದ್ಯೋಗ ಮತ್ತು ಅಸಮಾನತೆಯ ವಿರುದ್ಧದ ಹೋರಾಟದಲ್ಲಿ, ಉತ್ತಮ ಭವಿಷ್ಯದ

ನಿರ್ಮಾಣದಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಬೇಕಾಗಿದೆ. ಅವರು ಸಕ್ರಿಯವಾಗಿ, ಸಂಪೂರ್ಣವಾಗಿ ಭಾಗವಹಿಸದಿದ್ದರೆ ಯಾವುದೇ ಸಾಮಾಜಿಕ ಪರಿವರ್ತನೆ ಅಸಾಧ್ಯ. ಅನಕ್ಷರಸ್ಥ ಮಹಿಳೆಯರನ್ನು ಅಕ್ಷರಸ್ಥರಾಗಿಸುವುದು ಮಹಿಳೆಯರ ಜವಾಬ್ದಾರಿ ಮಾತ್ರವಲ್ಲ, ಶಾಂತಿ ಮತ್ತು ಆನಂದದ ಭವಿಷ್ಯವನ್ನು ಗುರಿಯಾಗಿಟ್ಟುಕೊಂಡಿರುವ ಎಲ್ಲರ ಜವಾಬ್ದಾರಿ ಇದು. ಆದರೆ ಸಾಕ್ಷರಸ್ಥ ಮಹಿಳೆ ಮಾತ್ರ ತನ್ನ ಸಂಗಾತಿ ಮಹಿಳೆಯರ ಸಂಕಟ, ಆತಂಕ, ಆನಂದಗಳನ್ನು ಅರಿತು ಕೊಳ್ಳಬಲ್ಲಳು. ಹೀಗಾಗಿ ಅವರದೇ ಹೆಚ್ಚಿನ ಜವಾಬ್ದಾರಿಯಾಗಿದೆ.



ಅಕ್ಷರಸ್ಥ ಮಹಿಳೆ ಅನಕ್ಷರಸ್ಥ ಮಹಿಳೆಗಿಂತ ಸ್ವತಂತ್ರಳು. ಪತ್ರ ಬರೆಯುವುದೇ ಆಗಿರಲಿ, ಗಂಡನಿಂದ ಇಲ್ಲವೇ ಮಕ್ಕಳಿಂದ ಬರುವ ಪತ್ರ ಓದುವುದಾಗಲೀ, ಅರ್ಜಿಯನ್ನು ತುಂಬುವುದಾಗಲೀ, ರಸ್ತೆ ಚಿಹ್ನೆಗಳನ್ನು ಓದುವುದಾಗಲೀ, ಕೊಳ್ಳುವ ಪದಾರ್ಥಗಳ ಬೆಲೆಯನ್ನು ತಿಳಿಯುವುದಾಗಲೀ ಅಕ್ಷರ ಕಲಿತ ಮಹಿಳೆ ಸ್ವತಂತ್ರವಾಗಿ ನಿರ್ವಹಿಸಬಲ್ಲಳು. ಅನೇಕ ಅನಕ್ಷರಸ್ಥ ಮಹಿಳೆಯರಿಗೆ ರೇಷನ್ ಅಂಗಡಿಗಳಲ್ಲಿ, ಬಡ್ಡಿ ವಸೂಲಿಯಲ್ಲಿ, ಅವರಿಗೆ ಓದುಬಾರದು ಎಂಬ ಕಾರಣದಿಂದಲೇ ಮೋಸ ಮಾಡಲಾಗುತ್ತಿದೆ.

ಅಕ್ಷರಸ್ಥ ಮಹಿಳೆಗೆ ಆತ್ಮವಿಶ್ವಾಸವಿದೆ. ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲಳು. ಓದು-ಬರಹದ ಜ್ಞಾನ ಅವಳಿಗೆ ವಿವೇಚನಾಶಕ್ತಿಯನ್ನು ಒದಗಿಸಬಲ್ಲದು. ಅಕ್ಷರಜ್ಞಾನದಿಂದ ಅವಳ ಬಗ್ಗೆ ಅವಳಿಗಿರುವ ಭರವಸೆ ಹೆಚ್ಚುತ್ತದೆ. ಅಕ್ಷರಜ್ಞಾನ ಕೇವಲ ಅನುಕೂಲತೆಗಾಗಿ ಅಲ್ಲ. ನಾಗರಿಕ ಮಾನವರ ಮೂಲಭೂತ ಅಗತ್ಯವೇ ಅದು. ಓದುವುದು, ಬರೆಯುವುದು ನಾಗರಿಕತೆಯಷ್ಟೇ ಪುರಾತನವಾದದ್ದು. ಈಚಿನ ದಿನಗಳಲ್ಲಿ ಇದರ ಅಗತ್ಯವನ್ನು ಮತ್ತೊಮ್ಮೆ ಗುರುತಿಸಲಾಗಿದೆ. ಓದುವ ಬಗ್ಗೆ ಇರುವ ಆಸಕ್ತಿಯ ಕೊರತೆ, ಹೆಣ್ಣಿಗಿರುವ ಆತ್ಮವಿಶ್ವಾಸದ ಕೊರತೆ ಅನೇಕ ವೇಳೆ ಅವಳ ನಿತ್ಯ ಜೀವನದ ಪರಿಸರದಿಂದಾಗಿರಬಹುದು.



ಮಹಿಳೆ ಪ್ರಜ್ಞಾಪೂರ್ವಕವಾಗಿ ತನ್ನ ನಿತ್ಯಜೀವನದ ಸಂಕೋಲೆಗಳನ್ನು ಮೀರಲು ಓದು-ಬರಹದ ಸಾಮರ್ಥ್ಯ ಒಂದು ಪ್ರಥಮ ಹೆಜ್ಜೆಯಾಗಬಹುದು. ನಾಲ್ಕು ಗೋಡೆಗಳ ನಡುವೆ ಬಂಧಿಯಾದ ಮಹಿಳೆಗೆ ಪುಸ್ತಕವು ವೈವಿಧ್ಯಮಯ ಹಾಗೂ ವಿಸ್ಮಯಕಾರಿ ಜಗತ್ತನ್ನೇ ತೆರೆಯುವುದು.

ವಾಸ್ತವವನ್ನು ಅರಿಯಲು, ಅದನ್ನು ಕುರಿತು ಚಿಂತಿಸಲು ನಿಷ್ಪಕ್ಷಪಾತವಾಗಿ ಪರಿಶೀಲಿಸಲು ಅಕ್ಷರಜ್ಞಾನ ಸಹಾಯಕ. ವಿಶ್ವದಲ್ಲಿ ಮಹಿಳೆಯು ತನ್ನ ಸ್ಥಾನವನ್ನು ಅರಿಯಲು, ನಿಸರ್ಗಕ್ಕೂ ತನಗೂ ಇರುವ ಸಂಬಂಧವನ್ನು ಗ್ರಹಿಸಲು, ಒಟ್ಟಿನಲ್ಲಿ ತನ್ನ ಬಗ್ಗೆಯೇ ಅರಿಯಲು ಸಾಕ್ಷರತೆ ಮೊದಲ ಹೆಜ್ಜೆ.

ಇದರಿಂದಾಗಿ ಅಕ್ಷರಜ್ಞಾನವನ್ನು ಕೇವಲ ಓದು ಬರಹಕ್ಕೆ ಸೀಮಿತಗೊಳಿಸಲಾಗದು. ಅಂದರೆ ಇದು ವಿಶಾಲವಾದ ಅರ್ಥದಲ್ಲಿ ಕ್ರಿಯಾತ್ಮಕ ಸಾಕ್ಷರತೆ. ಕ್ರಿಯಾತ್ಮಕ ಸಾಕ್ಷರತೆಯನ್ನು ಈ ರೀತಿ ನಿರೂಪಿಸಬಹುದು.

1. ಸ್ವಾವಲಂಬನೆಯನ್ನು ಸಾಧಿಸುವುದು ಸಂಖ್ಯಾಜ್ಞಾನದ ಕಲಿಕೆ.
2. ಅವರಿಗೆ ಆದ ವಂಚನೆಯ ಕಾರಣದ ಅರಿವು ಅವರಲ್ಲಿ ಮೂಡಬೇಕು. ಸಂಘಟನೆಯ ಮೂಲಕ ಅಭಿವೃದ್ಧಿಯ ಹಾದಿಯಲ್ಲಿ ಅವರು ಮುಂದುವರಿಯಬೇಕು.
3. ಆರ್ಥಿಕ ಸ್ಥಿತಿಯ ಸುಧಾರಣೆ ಮತ್ತು ಅವಳ ಯೋಗಕ್ಷೇಮವನ್ನು ಸಾಧಿಸಿಕೊಳ್ಳುವ ಕಲೆಗಾರಿಕೆಯನ್ನು ಗಳಿಸಿಕೊಳ್ಳುವುದು.
4. ರಾಷ್ಟ್ರೀಯ ಏಕತೆ, ಪರಿಸರ ಸಂರಕ್ಷಣೆ, ಮಹಿಳೆಯರ ಸಮಾನತೆ, ಸಣ್ಣ ಕುಟುಂಬದ ನೀತಿಯನ್ನು ಅಳವಡಿಸುವುದು ಇತ್ಯಾದಿ.

ಈ ವ್ಯಾಖ್ಯೆಯನ್ನು ಗಮನಿಸಿ ಅನೇಕ ಅಕ್ಷರಸ್ಥರು ಕ್ರಿಯಾತ್ಮಕ ಅಕ್ಷರಸ್ಥರಾಗಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ಅನಕ್ಷರಸ್ಥ ಮಹಿಳೆಯರಿಗೇ ಬಹುತೇಕ ವಿಷಯಗಳು ಗೊತ್ತಿವೆ. ಅವರೇನೂ ಅಜ್ಞಾನಿಗಳಲ್ಲ. ಅವರ ಅನುಭವದಿಂದ ಹಾಗೂ ಮೌಖಿಕವಾದ ಅನುಭವ ವಿನಿಮಯದಿಂದ ಸಾಮಾನ್ಯ ಜ್ಞಾನ ಹಾಗೂ ವ್ಯವಹಾರಿಕ ಚಾತುರ್ಯವನ್ನು ಗಳಿಸಿಕೊಂಡಿರುವರು. ಆದರೆ ಅಷ್ಟೇ ಜ್ಞಾನವು ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಸಾಕಾಗುವುದಿಲ್ಲ. ಈ ಅನುಭವ ಅವರ ಜೀವನ ಸುಧಾರಣೆಗೆ ಸಾಕಾಗುವುದಿಲ್ಲ.

ಓದುಬರಹವನ್ನು ಕಲಿಯುವುದರಿಂದ ಅವಳಿಗೆ ವರ್ತಮಾನ ಪತ್ರಿಕೆ, ಪುಸ್ತಕಗಳನ್ನು ಓದಲು ಸಾಧ್ಯವಾಗುವುದು.

ಅಕ್ಷರಜ್ಞಾನದಿಂದ ತತ್‌ಕ್ಷಣ ಉಂಟಾಗುವ ಲಾಭವೆಂದರೆ ಮಹಿಳೆಯ ಆರೋಗ್ಯ ಸುಧಾರಣೆ ಹಾಗೂ ಅವಳ ಮಗುವಿನ ಪೋಷಣೆ. ಒಂದೇ ಸಾಮಾಜಿಕ ಆರ್ಥಿಕ ಗುಂಪಿಗೆ ಸೇರಿದ ಅನಕ್ಷರಸ್ಥ ಮಹಿಳೆಯ



ಮಕ್ಕಳಿಗಿಂತ ಅಕ್ಷರಸ್ಥ ಮಹಿಳೆಯ ಮಕ್ಕಳು ಬದುಕಿ ದೊಡ್ಡವರಾಗಿ ಬೆಳೆಯುವ ಅವಕಾಶಗಳು ಹೆಚ್ಚು ಎಂದು ವೈಜ್ಞಾನಿಕ ಅಧ್ಯಯನಗಳು ಸೂಚಿಸಿವೆ. ಆರೋಗ್ಯ, ಊಟೋಪಚಾರ, ರೋಗನಿರೋಧ, ನೈರ್ಮಲ್ಯವನ್ನು ಕುರಿತ ಮಾಹಿತಿಗಳು ಕಲಿತ ಮಹಿಳೆಗೆ ಹೆಚ್ಚಾಗಿ ಲಭಿಸುತ್ತಿವೆ. ಮಗುವಿನ ಬಗ್ಗೆ ಹಾಗೂ ರೋಗದ ಬಗ್ಗೆ ಅವಳ ದೃಷ್ಟಿಕೋನವೇ ಬೇರೆ. ಹೆಚ್ಚಿನ ಜಾಗೃತಿ, ಹೆಚ್ಚಿನ ಮುಂಜಾಗ್ರತೆ ಮತ್ತು ಮಗುವನ್ನು ಆರೋಗ್ಯದಿಂದಿರಿಸುವ ಪ್ರಯತ್ನ ಅಕ್ಷರಸ್ಥ ತಾಯಿಗೆ ಲಭ್ಯ. ಸಮಾಜದಲ್ಲಿ ದೊರೆಯುವ ಆರೋಗ್ಯ ಸೌಲಭ್ಯಗಳ ಸಮಗ್ರ ಪ್ರಯೋಜನವನ್ನು ಒಬ್ಬ ಅಕ್ಷರಸ್ಥ ತಾಯಿ ಮಾತ್ರ ಪೂರ್ಣವಾಗಿ ಪಡೆಯಬಲ್ಲಳು.


ಮೂಢನಂಬಿಕೆಗಳು; ರೋಗ್ಯಕ್ಕೆ ಹಾನಿಕರವಾದ ಸಂಪ್ರದಾಯದ ಆಚರಣೆಗಳನ್ನು ಕೈ ಬಿಡುವುದು, ಸರಿಯಾದ ನಿರ್ಣಯಗಳನ್ನು ಕೈಗೊಳ್ಳುವುದು, ಅಕ್ಷರಸ್ಥ ಮಹಿಳೆಯ ಮಗುವಿನ ಉಳಿವಿನ ಸಾಧ್ಯತೆಯನ್ನು ಹೆಚ್ಚಿಸುವುದು.

ಅಕ್ಷರಸ್ಥ ಮಹಿಳೆಯು ಗರ್ಭಿಣಿಯಾಗಿದ್ದಾಗ, ಹಾಲೂಡುವಾಗ ತನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವ ಸಾಮರ್ಥ್ಯ ಅಕ್ಷರಸ್ಥ ಮಹಿಳೆಗೆ ಹೆಚ್ಚು.

## ಕುಟುಂಬ ಯೋಜನೆ

ಅಕ್ಷರಸ್ಥ ಮಹಿಳೆಯರಿಗೆ ಅನಕ್ಷರಸ್ಥ ಮಹಿಳೆಗಿಂತ ಸರಾಸರಿ ಕಡಿಮೆ ಮಕ್ಕಳು. ಅಕ್ಷರಸ್ಥ ಗಂಡಸರೂ ಅನಕ್ಷರಸ್ಥ ಗಂಡಸರಿಗಿಂತ ಕಡಿಮೆ ಮಕ್ಕಳನ್ನು ಪಡೆಯಬಯಸುತ್ತಾರೆ. ಮಹಿಳೆಯರ ಅಕ್ಷರಜ್ಞಾನ ನೀಡುವಷ್ಟು ಮಟ್ಟಿಗೆ ಬೇರೆ ಯಾವ ವಿಧಾನವೂ ಜನಸಂಖ್ಯೆಯನ್ನು ಹತೋಟಿಗೆ ತರಲಾರದು.

ಇದಕ್ಕೆ ಬೇಕಾದಷ್ಟು ಕಾರಣಗಳಿವೆ. ಅನೇಕ ಜನನ ನಿಯಂತ್ರಣ ವಿಧಾನಗಳ ಬಗ್ಗೆ ತಿಳಿದುಕೊಂಡು ಆಯ್ಕೆಮಾಡಿಕೊಳ್ಳಲು, ಅವುಗಳ ಉಪಪರಿಣಾಮಗಳನ್ನು ನಿರ್ವಹಿಸಲು ಮತ್ತು ಮಾಹಿತಿ ಪಡೆಯಲು ಅಕ್ಷರಸ್ಥ ಮಹಿಳೆಗೇ ಸಾಧ್ಯ. ಅವಳ ದೇಹವನ್ನು ನಿಯಂತ್ರಿಸಲು, ಮಗುವನ್ನು ಬೇಕೆನಿಸಿದಾಗ ಮಾತ್ರ ಪಡೆಯಲು, ಗಂಡನ ಇಷ್ಟದಂತೇ ತನ್ನ ನಿಲುವನ್ನೂ ನಿರ್ವಹಿಸಲು ಸಾಕ್ಷರತೆ ಸಹಾಯಕಾರಿಯಾಗುವುದು.





EDU-110
N94
05194
COMMUNITY HEALTH CELL
LIBRARY AND DOCUMENTATION UNIT

# ಉದ್ಯೋಗ

ಅಕ್ಷರಸ್ಥ ಮಹಿಳೆಗೆ ಅನಕ್ಷರಸ್ಥ ಮಹಿಳೆಗಿಂತ ಸುಲಭವಾಗಿ ಉದ್ಯೋಗ ಸಿಕ್ಕಿ, ಅವಳು ಉತ್ತಮ ಸೌಕರ್ಯಗಳನ್ನು ಪಡೆಯಲು ಸಾಧ್ಯವಾಗುತ್ತವೆ. ನಿರುದ್ಯೋಗ ಎಲ್ಲರಿಗೂ ಸೇರಿದ ಬೃಹತ್ ಸಮಸ್ಯೆಯಾದರೂ ಅದು ಮಹಿಳೆಗೆ ತೀವ್ರಸಮಸ್ಯೆ. ಏಕೆಂದರೆ ಬೇಕಾದಾಗ ನೇಮಿಸಿಕೊಳ್ಳಲು, ಬೇಡವಾದಾಗ ವಜಾಮಾಡಲು ಮೊದಲು ಮಹಿಳೆಯರೇ ಗುರಿಯಾಗುತ್ತಾರೆ. ತಾಂತ್ರಿಕ ಉಪಕರಣಗಳ ಬಳಕೆ ಮೊದಲು ಮಹಿಳಾ ಉದ್ಯೋಗಿಗಳ ಮೇಲೇ ತೀವ್ರ ಪರಿಣಾಮ ಬೀರುವುದು. ಏಕೆಂದರೆ, ಮಹಿಳೆಯರು ಪರಿಣತರಲ್ಲ; ಅವರು ಅಸಂಘಟಿತರು; ಅವರಿಗೆ ಉದ್ಯೋಗ ಅನಿವಾರ್ಯ ಅಗತ್ಯವಲ್ಲ! ಹೀಗಾಗಿ ಅವರು ಪ್ರತಿಭಟಿಸುವ ಸಾಧ್ಯತೆ ಕಡಿಮೆ. ವಿದ್ಯಾಭ್ಯಾಸವು ಅವರಿಗೆ ಪರಿಣತಿ ಹಾಗೂ ಅರ್ಹತೆಯನ್ನು ನೀಡಿ ಗಂಡಿನೊಂದಿಗೆ ಸಮಾನವಾಗಿ ಸ್ಪರ್ಧಿಸಲು ಅನುಕೂಲ ಮಾಡಿಕೊಡುತ್ತದೆ. ಅವರನ್ನು ಸಂಘಟಿಸಲು, ದುಡಿಯುವ ಮಹಿಳೆಯ ಕಷ್ಟವನ್ನು ಅರಿಯಲು ವಿದ್ಯೆ ಸಹಕಾರಿ.



# ಸಂವಿಧಾನಾತ್ಮಕ ಮತ್ತು ನ್ಯಾಯಾಂಗ ಹಕ್ಕು

ಉದ್ಯೋಗದ ಕ್ಷೇತ್ರದಲ್ಲೇ ಅಲ್ಲ ತಮ್ಮ ಜೀವನದ ಎಲ್ಲ ಅಂಗಗಳಲ್ಲೂ ಸಂವಿಧಾನಬದ್ಧ ಆಶ್ವಾಸನೆಯಾದ ಪ್ರಜಾಸತ್ತಾತ್ಮಕ ಹಕ್ಕುಗಳಿಂದ ಮಹಿಳೆಯರು ವಂಚಿತರಾಗಿದ್ದಾರೆ.

ಗಂಡಬಿಟ್ಟ ಮಹಿಳೆಯರಿಗೆ, ಅಳಿಯಂದಿರ ಕೋಟಲೆಗೆ ಒಳಗಾದವರಿಗೆ, ಸವತಿಯ ಕಾಟಕ್ಕೆ ಒಳಗಾದವರಿಗೆ, ಬಲಾತ್ಕಾರ, ಬೀದಿಕಾಮಣ್ಣಗಳ ಕೀಟಲೆಗೆ ಒಳಗಾದವರಿಗೆ, ಆಸ್ತಿಹಕ್ಕಿನಿಂದ ವಂಚಿತರಾದವರಿಗೆ, ಕಾನೂನು ಬಾಹಿರವಾಗಿ ಹೊರಹಾಕಲ್ಪಟ್ಟವರಿಗೆ ವಿಶೇಷ ಕಾನೂನಿನ ರಕ್ಷಣೆ ಇದೆ. ಈ ಕಾನೂನಿಗಾಗಿ ಹೋರಾಟ ನಡೆಸಿದ ಮಹಿಳೆಯರು ಅಭಿನಂದನೀಯರು. ಆದರೆ ಬಹುತೇಕ ಮಹಿಳೆಯರಿಗೆ ಈ ಕಾನೂನುಗಳ ಬಗ್ಗೆ ಜಾಗೃತಿಯೇ ಇಲ್ಲ. ಹೀಗಾಗಿ ಅವ್ರ ತಮ್ಮ ಹಕ್ಕನ್ನು ಚಲಾಯಿಸಲಾರರು. ಇಂದಿನ ಪರಿಸ್ಥಿತಿಯಲ್ಲಿ ಕಾನೂನು ಸಾಕ್ಷರತೆ ಭಾರತೀಯ ಮಹಿಳೆಗೆ ಅತ್ಯವಶ್ಯ.



## ಸಮಾನ ಸ್ಥಾನ

**ಹೆ**ಣ್ಣಿನ ಸ್ಥಾನಮಾನದ ಸಮಾನತೆಯನ್ನು ಕೇವಲ ನ್ಯಾಯಾಲಯಗಳಿಂದ ಅಥವಾ ಕಾನೂನುಗಳಿಂದ ಸಾಧಿಸಲು ಸಾಧ್ಯವಿಲ್ಲ. ಸಮಾಜದ ಒಂದು ಚಿಂತನಾಕ್ರಮವೇ ಮಹಿಳೆಗೂ ಗಂಡಸಿದ ಸಮಾಸ ಅವಕಾಶ ಕೊಡುವಂತೆ ರೂಪಗೊಳ್ಳಬೇಕಗು. ಮಾನಸಿಕವಾಗಿ, ದೈಹಿಕವಾಗಿ ಮಹಿಳೆಯು ಪುರುಷನಿಗೆ ಸಮಾನವಾಗಿ ಸನ್ನದ್ಧಳಾಗಬೇಕು. ತನ್ನ ಹಕ್ಕುಗಳ ಬಗ್ಗೆ ಅರಿವಿರುವ, ಸ್ವಾವಲಂಬಿ ಮಹಿಳೆ ಮಾತ್ರ ಗಂಡಿಗೆ ಸಮಾನವಾಗಿ ನಿಲ್ಲಬಲ್ಲಳು. ಅಕ್ಷರಸ್ಥ ಗಂಡು, ಪ್ರಬುದ್ಧ ಸಮಾಜಚಿಂತಕನಾದಾಗ ಹಾಗೂ ಮಹಿಳೆಯೂ ಅದಕ್ಕೆ ಪೂರಕವಾಗಿದ್ದಾಗ ಮಾತ್ರ ಇದು ಸಾಧ್ಯ. ಆದ್ದರಿಂದ ಅಕ್ಷರ ಜ್ಞಾನವಾಗಲೀ, ಕ್ರಿಯಾತ್ಮಕ ಅಕ್ಷರಜ್ಞಾನವಾಗಲೀ ಸಾಲದು. ಆದರೆ ಉಳಿದ ಪ್ರಗತಿಗೆ ಇದೇ ಮೊದಲ ಅಗತ್ಯವೆಂಬುದನ್ನು ಮರೆಯಬಾರದು.

## ಮಹಿಳೆಯ ಕಲಿಕೆಯ ವಿಷವರ್ತುಲ

**ಮ**ಹಿಳೆಯ ಕಲಿಕೆಯ ಮುಖ್ಯ ಹಂತವಾದ ಅಕ್ಷರಜ್ಞಾನವು ಬಡತನ ನಿವಾರಣೆಗೆ ಮೊದಲ ಹಂತ. ಸಾಮಾಜಿಕ ದಬ್ಬಾಳಿಕೆಯ ಹೊರೆ ಇಳಿಸಿಕೊಳ್ಳಲು ಅದು ಸಾಧನ. ವಿದ್ಯಾವಂತ ಮಹಿಳೆಯ ಮಕ್ಕಳೆಲ್ಲರೂ ವಿದ್ಯಾವಂತರೇ ಆಗಿರುವುದು ನಮಗೆ ತಿಳಿದುಬಂದಿದೆ. ಅವಿದ್ಯಾವಂತ ಮಹಿಳೆಯ ಮಕ್ಕಳೇ ಶಾಲೆ ಬಿಟ್ಟು ಬಿಡುತ್ತಿರುವುದೂ ಕಂಡುಬಂದಿದೆ. ಶಾಲೆಗೆ ಸೇರಿದ ಪ್ರತಿ ನೂರು ಹೆಣ್ಣುಮಕ್ಕಳ ಪೈಕಿ 74 ಜನ ನಾಲ್ಕನೇ ತರಗತಿ ಮೀರುವುದೇ ಇಲ್ಲ. ಅದಕ್ಕೆ ಅನೇಕ ಆರ್ಥಿಕ ಸಾಮಾಜಿಕ ಕಾರಣಗಳಿವೆ. ಮಹಿಳೆಗೆ ಇರುವ ಬಡತನದ ಸಂಕೋಲೆ, ಕೆಲಸದ ಹೊಣೆಗಾರಿಕೆ ಮತ್ತು ಗಂಡಿನ ದಬ್ಬಾಳಿಕೆ ಅವಳನ್ನು ಅಕ್ಷರಸ್ಥಳನ್ನಾಗಲು ಬಿಡುವುದಿಲ್ಲ. ಈ ವಿಷವರ್ತುಲವನ್ನು ಮೀರಿ ಹೊರಬರುವುದು ಹೇಗೆ? ಅನಕ್ಷರತೆಯಿಂದ ಬಡತನ-ಬಡತನದಿಂದ ಅನಕ್ಷರತೆ.

ಜಗತ್ತಿನ ಅನೇಕ ರಾಷ್ಟ್ರಗಳ ಸರಕಾರಗಳು ಅನಕ್ಷರತೆಯನ್ನು ತೊಡೆದು ಹಾಕಿ ಅಕ್ಷರ ಕಲಿಸಲು ಪ್ರಯತ್ನಿಸಿವೆ. ಭಾರತದಂತಹ ದೇಶದಲ್ಲಿ ಮಹಿಳೆಯರ ಸಾಕ್ಷರತೆ ತೀರಾ ಕಡಿಮೆ (90 ವರ್ಷಗಳಲ್ಲಿ ಕೇವಲ ಶೇಕಡಾ 180ರಷ್ಟು) ಅದಕ್ಕಾಗಿ ಜನತಾ ಚಳುವಳಿ - ಅನಕ್ಷರತೆಯ ವಿರುದ್ಧ ಸಮರೋಪಾದಿಯ ಹೋರಾಟ. ಈ



ಹೋರಾಟ ಕೇವಲ ಅನಕ್ಷರತೆಯ ವಿರುದ್ಧವಲ್ಲ. ಬಡತನದ ವಿರುದ್ಧ, ದಬ್ಬಾಳಿಕೆಯ ವಿರುದ್ಧ, ಮಹಿಳೆಯನ್ನು ಅನಕ್ಷರಸ್ಥಳನ್ನಾಗಿ ಉಳಿಸಿರುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ. ಈ ಚಳವಳಿಯನ್ನು ಸರಕಾರಿ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ವಿದ್ಯಾವಂತ ಗಂಡಸರು, ಹೆಂಗಸರು, ಸಾಮಾಜಿಕ ಬದಲಾವಣೆಯನ್ನು ಅಪೇಕ್ಷಿಸುವವರು ಸೇರಿ ಒಂದು ಪ್ರಬಲ ಆಂದೋಳನವಾಗಿಸಬೇಕು. ಸಾಕ್ಷರತೆಯೇ ಮಹಿಳೆಯರ ಬಿಡುಗಡೆಗೆ ಕೀಲಿಕೈ ಎಂಬುದನ್ನು ಈ ಚಳವಳಿಯು ಮನದಟ್ಟು ಮಾಡಿಕೊಡಬೇಕು.







# ಭಾರತ ಜ್ಞಾನ ವಿಜ್ಞಾನ ಸಮಿತಿಯ-ನಕ್ಷೆ

1. ಮೊದಲಿನಿಂದಲೂ ಜನರ ಬೆಂಬಲವನ್ನು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಒದಗಿಸಿಕೊಡುವುದು.
2. ಯೋಜನೆಯ ಎಲ್ಲಾ ಹಂತಗಳಲ್ಲೂ ಸಹಕರಿಸುವುದು-ಜನರನ್ನು ಪರಿಸರವನ್ನು ಯೋಜನೆಯ ಸಹಾಯಕ್ಕೆ ತಿರುಗಿಸುವುದು-ತರಬೇತಿ ನೀಡುವುದು, ಜನರ ಬೆಂಬಲವನ್ನು ಬಲಗೊಳಿಸಿ ಕಾಯ್ದಿರಿಸುವುದು.
3. ಸತತವಾಗಿ ಅಧಿಕಾರಿಗಳ, ರಾಜಕಾರಣಿಗಳ, ಸ್ವಯಂ ಸೇವಾ ಸಂಘಗಳ, ಕಾರ್ಮಿಕ ಸಂಘಗಳ, ಬುದ್ಧಿಜೀವಿಗಳ ಸಂಪರ್ಕವಿಟ್ಟುಕೊಂಡು ಸಾಕ್ಷರತಾ ಆಂದೋಲನಕ್ಕೆ ಪ್ರೋತ್ಸಾಹ ಮತ್ತು ಸಹಾಯವನ್ನು ನೀಡುವುದು.
4. ಜಿಲ್ಲೆಗಳಲ್ಲಿ ಮತ್ತು ರಾಜ್ಯಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕೇಂದ್ರಗಳನ್ನು ತೆರೆದು ಸಾಕ್ಷರತಾ ಆಂದೋಲನವನ್ನು ಸ್ಥಿರಗೊಳಿಸುವುದು. ಇದರಿಂದ ಸಾಕ್ಷರತಾ ಕಾರ್ಯಕ್ರಮದ ನಂತರವೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಆರೋಗ್ಯ, ಸಾಂಸ್ಕೃತಿಕ ಜಾಗೃತಿ ಮುಂದುವರಿಸಲು ಸಹಾಯ ಮಾಡಲಾಗುವುದು. ಸಂಘಟನೆಗಳನ್ನು ರಚಿಸುವುದು ಮತ್ತು ಜನರೊಂದಿಗೆ ವಿಶ್ವಾಸದಿಂದ ಸಂಪರ್ಕ ಹೊಂದಿರುವುದು ಪ್ರಜಾಪ್ರಭುತ್ವದಲ್ಲಿ ಜನರನ್ನು ಅಭಿವೃದ್ಧಿಯ ಕಡೆಗೆ ಸೆಳೆದೊಯ್ಯಲು ಸಹಾಯಕವಾಗುವುದು.